Re.No. D. 221

भारत का राजपत्र
The Gazette of India

ಭಾರತ ರಾಜಪತ್ರ

(Extraordinary)
(ವಿಶೇಷ ಸಂಚಿಕೆ)

| भाग IX | अनुभाग 1 |
|---|---|
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, बुधवार , 07 जून, 2023 | ज्येष्ट 19, 1945 (शक) | खंड.53 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 53 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.53 |


**Ministry of Law and Justice**
(Legislative Department)
New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE EMIGRATION ACT, 1983 (NO.31 OF 1983) (2) THE FOOD SAFETY AND STANDARDS ACT, 2006 (NO.34 OF 2006) (3) THE PAYMENT AND SETTLEMENT SYSTEMS ACT, 2007 (NO.51 OF 2007) (4) THE NATIONAL JUTE BOARD ACT, 2008 (NO.12 OF 2009) (5) THE NATIONAL GREEN TRIBUNAL ACT, 2010 (NO.19 OF 2010) (6) THE RIGHT TO FAIR COMPENSATION AND TRANSPARENCY IN LAND ACQUISITION, REHABILITATION AND RESETTLEMENT ACT, 2013 (NO.30 OF 2013) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ವಲಸೆ ಅಧಿನಿಯಮ, 1983 (1983ರ ಸಂಖ್ಯೆ 31) (2) ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006 (2006ರ ಸಂಖ್ಯೆ 34) (3) ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆ ಅಧಿನಿಯಮ, 2007 (2007ರ ಸಂಖ್ಯೆ 51) (4) ರಾಷ್ಟ್ರೀಯ ಸೆಣಬು ಮಂಡಳಿ ಅಧಿನಿಯಮ, 2008 (2009ರ ಸಂಖ್ಯೆ 12) (5) ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 (2010ರ ಸಂಖ್ಯೆ 19) (6) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಹಕ್ಕು ಅಧಿನಿಯಮ, 2013 (2013ರ ಸಂಖ್ಯೆ 30) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ವಲಸೆ ಅಧಿನಿಯಮ, 1983

## (1983ರ ಸಂಖ್ಯೆ 31)

[10ನೇ ಸೆಪ್ಟೆಂಬರ್, 1983.]

ಭಾರತದ ನಾಗರಿಕರ ವಲಸೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸಲು ಮತ್ತು ತಿದ್ದುಪಡಿ ಮಾಡಲು ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತಾಲ್ಕನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವಲಸೆ ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಎಲ್ಲ ಭಾರತದ ನಾಗರಿಕರಿಗೆ ಅನ್ವಯಿಸುತ್ತದೆ.

(3) ಇದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಯಾವುದೇ ಅಂಥ ಉಪಬಂಧದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು ಆ ಉಪಬಂಧದ ಪ್ರಾರಂಭಕ್ಕೆ ಮಾಡಿದ ಉಲ್ಲೇಖವೆಂಬಂತೆ ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಮಾಣಪತ್ರ" ಎಂದರೆ, ಪ್ರಕರಣ 11ರ ಮೇರೆಗೆ ನೀಡಿದ ನೋಂದಣಿ ಪ್ರಮಾಣಪತ್ರ;

* ಡಿಸೆಂಬರ್ 30, 1983ರಂದು ಜಾರಿಗೆ ಬಂದಿದೆ: ಅಧಿಸೂಚನೆ ಸಂಖ್ಯೆಎಸ್. ಒ940 (ಇ), ದಿನಾಂಕ:30–12–1983. ಭಾರತ ವಿಶೇಷ ರಾಜಪತ್ರ, ಭಾಗ–II, ವಿಭಾಗ 3 (ii)

(ಬಿ) "ಒಯ್ಯುವ ವಾಹನ" ಎಂಬ ಪದವು ಹಡಗನ್ನು, ವಾಹನವನ್ನು, ನಾಡದೋಣಿಯನ್ನು ಮತ್ತು ವಿಮಾನವನ್ನು ಒಳಗೊಳ್ಳುತ್ತದೆ;

(ಸಿ) "ಅವಲಂಬಿತ" ಎಂದರೆ, ವಲಸಿಗನೊಂದಿಗೆ ಸಂಬಂಧ ಹೊಂದಿರುವಂಥ ಮತ್ತು ವಲಸಿಗನ ಮೇಲೆ ಅವಲಂಬಿತನಾಗಿರುವಂಥ ಯಾರೇ ವ್ಯಕ್ತಿ;

(ಡಿ) "ವಲಸಿಗ" ಎಂದರೆ, ವಲಸೆ ಹೋಗಲು ಉದ್ದೇಶಿಸಿರುವ ಅಥವಾ ವಲಸೆ ಹೋಗುವ ಅಥವಾ ವಲಸೆ ಹೋದ ಭಾರತದ ಯಾರೇ ನಾಗರಿಕ, ಆದರೆ ಇದರಲ್ಲಿ,–

(i) ವಲಸಿಗನ ಅವಲಂಬಿತನು ವಲಸಿಗನೊಂದಿಗೆ ಹೋಗುತ್ತಿರಲಿ ಅಥವಾ ವಲಸಿಗನು ಯಾವ ರಾಷ್ಟ್ರಕ್ಕೆ ಕಾನೂನು ಸಮ್ಮತವಾಗಿ ವಲಸೆ ಹೋಗಿರುವನೋ ಆ ರಾಷ್ಟ್ರದಲ್ಲಿ ಆ ವಲಸಿಗನನ್ನು ಸೇರಿಕೊಳ್ಳುವ ಉದ್ದೇಶದಿಂದ ಆ ತರುವಾಯ ಹೋಗುತ್ತಿರಲಿ, ಅಂಥ ಅವಲಂಬಿತನು;

(ii) ಯಾವ ವ್ಯಕ್ತಿಯು, ಹದಿನೆಂಟು ವರ್ಷ ವಯಸ್ಸು ತುಂಬಿದ ತರುವಾಯ ಯಾವುದೇ ಸಮಯದಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಅವಧಿ ಭಾರತದ ಹೊರಗೆ ವಾಸ ಮಾಡಿರುವನೋ/ಳೋ ಆ ಯಾರೇ ವ್ಯಕ್ತಿಯು ಅಥವಾ ವ್ಯಕ್ತಿಯ ಅಥವಾ ಆ ವ್ಯಕ್ತಿಯ ಪತ್ನಿಯು/ ಪತಿಯು ಅಥವಾ ಮಗುವು

– ಸೇರುವುದಿಲ್ಲ;

(ಇ) "ವಲಸಿಗನನ್ನು ಒಯ್ಯುವ ವಾಹನ" ಎಂದರೆ ವಲಸಿಗರನ್ನು ಒಯ್ಯುವ ಸಲುವಾಗಿ ಅಥವಾ ಗೊತ್ತುಪಡಿಸಬಹುದಾದಷ್ಟು ಸಂಖ್ಯೆಯನ್ನು ಮೀರಿದ ವಲಸಿಗರನ್ನು ಒಯ್ಯಲು ವಿಶೇಷವಾಗಿ ಬಾಡಿಗೆಗೆ ತೆಗೆದುಕೊಂಡಂಥ ಯಾವುದೇ ಒಯ್ಯುವ ವಾಹನ:

ಪರಂತು, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳಕ್ಕೆ ವಲಸಿಗರನ್ನು ಒಯ್ಯುವ ಯಾವುದೇ ಒಯ್ಯುವ ವಾಹನವನ್ನು, ವಲಸಿಗರನ್ನು ಒಯ್ಯುವ ವಾಹನವೆಂದು ಭಾವಿಸತಕ್ಕದ್ದಲ್ಲ ಎಂದು ಘೋಷಿಸಬಹುದು.

(ಎಫ್) "ವಲಸೆ ಹೋಗುವುದು" ಮತ್ತು "ವಲಸೆ" ಎಂದರೆ, ಯಾರೇ ವ್ಯಕ್ತಿಯು ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ನಿಯೋಜನೆ ಪಡೆಯುವ ದೃಷ್ಟಿಯಿಂದ (ಅಂಥ ನಿಯೋಜನೆಯನ್ನು ಪಡೆಯಲು ಒಪ್ಪಂದವನ್ನು ಅಥವಾ ಇತರ ಏರ್ಪಾಟನ್ನು ಮಾಡಿಕೊಂಡಿರಲಿ, ಮಾಡಿಕೊಳ್ಳದಿರಲಿ ಅಥವಾ ನೇಮಕಾತಿ ಏಜೆಂಟನ ಅಥವಾ ನಿಯೋಜಕನ ನೆರವಿನೊಂದಿಗೆ ಅಥವಾ ನೆರವಿಲ್ಲದೆ) ಭಾರತವನ್ನು ಬಿಟ್ಟುಹೋಗುವುದು;

(ಜಿ) "ನಿಯೋಜಕ" ಎಂದರೆ, ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ನಿಯೋಜನೆಯನ್ನು ನೀಡುವ ಅಥವಾ ನಿಯೋಜನೆ ನೀಡಲು ಪ್ರಸ್ತಾಪಿಸುವ ಯಾರೇ ವ್ಯಕ್ತಿ;

(ಹೆಚ್) "ನಿಯೋಜನೆ" ಎಂದರೆ, ಮಜೂರಿಗಾಗಿ ಅಥವಾ ಪ್ರತಿಫಲಕ್ಕಾಗಿ ಮಾಡುವ ಯಾವುದೇ ಸೇವೆ, ವೃತ್ತಿ ಅಥವಾ (ಓ) ಖಂಡದ ಅರ್ಥವ್ಯಾಪ್ತಿಯೊಳಗೆ ಬರುವ ಯಾವುದೇ ಬಗೆಯ ಕೆಲಸಕ್ಕೆ ನಿಯೋಜನೆ (ಕೇಂದ್ರ ಸರ್ಕಾರದ

ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿನ ಸೇವೆಯಾಗಿರದ, ವೃತ್ತಿಯಾಗಿರದ ಅಥವಾ ನಿಯೋಜನೆಯಾಗಿರದ) ಮತ್ತು ಅದರ ಎಲ್ಲ ವ್ಯಾಕರಣ ವ್ಯತ್ಯಾಸಗಳನ್ನು ಮತ್ತು ಸಜಾತೀಯ ಪದಾವಳಿಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಐ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜೆ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದದ್ದು;

(ಕೆ) "ವಲಸಿಗರ ಸಂರಕ್ಷಣಾಧಿಕಾರಿ" ಎಂದರೆ, ಪ್ರಕರಣ 3ರ ಮೇರೆಗೆ ನೇಮಕಗೊಂಡ ವಲಸಿಗರ ಸಂರಕ್ಷಣಾಧಿಕಾರಿ ಮತ್ತು ಪ್ರಕರಣ 5ರ ಮೇರೆಗೆ ಅಧಿಕೃತಗೊಂಡ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(ಎಲ್) "ನೌಕರಿ ಭರ್ತಿ ಮಾಡುವ ಏಜೆಂಟ್" ಎಂದರೆ, ನಿಯೋಜಕನ ಪರವಾಗಿ ಭಾರತದಲ್ಲಿ ನೌಕರಿ ಭರ್ತಿ ಮಾಡುವ ವ್ಯವಹಾರದಲ್ಲಿ ತೊಡಗಿರುವಂಥ ಮತ್ತು ಹಾಗೆ ನೌಕರಿಗೆ ಭರ್ತಿಯಾದ ಅಥವಾ ನೌಕರಿಗೆ ಭರ್ತಿಯಾಗ ಬಯಸುವ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಸೇರಿದಂತೆ ಅಂಥ ನೌಕರಿ ಭರ್ತಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಅಂಥ ನಿಯೋಜಕನನ್ನು ಪ್ರತಿನಿಧಿಸುವಂಥ ವ್ಯಕ್ತಿ;

(ಎಂ) "ನೌಕರಿ ಭರ್ತಿ" ಯಲ್ಲಿ ನೌಕರಿ ಭರ್ತಿಯ ಉದ್ದೇಶಕ್ಕಾಗಿ ಯಾವುದೇ ಜಾಹೀರಾತನ್ನು ಹೊರಡಿಸುವುದು, ಭಾರತದ ಹೊರಗಿನ ಯಾವುದೇ ರಾಷ್ಟ್ರದಲ್ಲಿ ಅಥವಾ ಸ್ಥಳದಲ್ಲಿ ಯಾವುದೇ ನಿಯೋಜನೆಯನ್ನು ದೊರಕಿಸಿಕೊಡಲು ಅಥವಾ ದೊರಕಿಸಿಕೊಳ್ಳುವುದಕ್ಕೆ ಸಹಾಯ ಮಾಡಲು ಜಾಹೀರಾತಿನ ಮೂಲಕ ಪ್ರಸ್ತಾವಿಸುವುದು ಮತ್ತು ಭಾರತದ ಹೊರಗಿನ ಯಾವುದೇ ರಾಷ್ಟ್ರದಲ್ಲಿ ಅಥವಾ ಸ್ಥಳದಲ್ಲಿ ಯಾರೇ ವ್ಯಕ್ತಿಯ ನಿಯೋಜನೆಗಾಗಿ ಅಥವಾ ನಿಯೋಜನೆಯ ಸಂಬಂಧದಲ್ಲಿ ಅಂಥ ವ್ಯಕ್ತಿಯೊಂದಿಗೆ ಯಾವುದೇ ಪತ್ರವ್ಯವಹಾರ, ಮಾತುಕತೆ ನಡೆಸುವುದು, ಒಪ್ಪಂದ ಅಥವಾ ಏರ್ಪಾಡು ಮಾಡಿಕೊಳ್ಳುವುದು ಒಳಗೊಳ್ಳುತ್ತದೆ;

(ಎನ್) "ನೋಂದಣಿ ಪ್ರಾಧಿಕಾರಿ" ಎಂದರೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ನೋಂದಣಿ ಪ್ರಾಧಿಕಾರಿಯಾಗಿ ಪ್ರಕರಣ 9ರ ಮೇರೆಗೆ ನೇಮಕಗೊಂಡ ಅಧಿಕಾರಿ;

(ಓ) "ಕೆಲಸ" ಎಂದರೆ:–

(i) ಯಾವುದೇ ರೂಪದ ಕೈಗಾರಿಕಾ ಅಥವಾ ಕೃಷಿ ದುಡಿಮೆಯೂ ಸೇರಿದಂತೆ ಯಾವುದೇ ಅಕುಶಲ ಕೆಲಸ;

(ii) ಯಾವುದೇ ಗೃಹಕೃತ್ಯ ಸೇವೆ;

(iii) ಯಾವುದೇ ಹೋಟೆಲ್ಲಿನಲ್ಲಿ, ರೆಸ್ಟೋರೆಂಟ್‌ನಲ್ಲಿ, ಚಹದಂಗಡಿಯಲ್ಲಿ ಅಥವಾ ಪಬ್ಲಿಕ್ ರೆಸ್ಟೋರೆಂಟ್‌ನಂಥ ಇತರ ಸ್ಥಳದಲ್ಲಿ ವ್ಯವಸ್ಥಾಪನ ಸಾಮರ್ಥ್ಯದ ಸೇವೆಯಲ್ಲದ ಯಾವುದೇ ಸೇವೆ;

(iv) ಟ್ರಕ್‌ನ ಅಥವಾ ಇತರ ವಾಹನದ ಚಾಲಕನಾಗಿ, ಮೆಕಾನಿಕ್ ಆಗಿ, ಟೆಕ್ನಿಷಿಯನ್ ಆಗಿ ಅಥವಾ ಕುಶಲ ಕಾರ್ಮಿಕನಾಗಿ ಅಥವಾ ಕುಶಲಕರ್ಮಿಯಾಗಿ ಮಾಡುವ ಕೆಲಸ;

(v) ಕಚೇರಿ ಸಹಾಯಕನಾಗಿ ಅಥವಾ ಅಕೌಂಟೆಂಟ್ ಆಗಿ ಅಥವಾ ಬೆರಳಚ್ಚುಗಾರನಾಗಿ ಅಥವಾ ಶೀಘ್ರಲಿಪಿಗಾರನಾಗಿ ಅಥವಾ ಮಾರಾಟಗಾರನಾಗಿ ಅಥವಾ ನರ್ಸ್ ಆಗಿ ಅಥವಾ ಯಾವುದೇ ಯಂತ್ರದ ಪ್ರವರ್ತಕನಾಗಿ ಮಾಡುವ ಕೆಲಸ;

(vi) ಯಾವುದೇ ಚಲನಚಿತ್ರದ, ವಸ್ತು ಪ್ರದರ್ಶನದ ಅಥವಾ ಮನರಂಜನೆಗೆ ಸಂಬಂಧಪಟ್ಟ ಅಥವಾ ಆ ಉದ್ದೇಶಗಳಿಗಾಗಿ ಮಾಡುವ ಕೆಲಸ;

(vii) ಭಾರತದ ಹೊರಗಡೆ ವೃತ್ತಿಪರ ಅಥವಾ ಯಾವುದೇ ಇತರ ಸ್ವರೂಪದ ಕೆಲಸಕ್ಕೆ ನಿಯೋಜಿತರಾಗಿರಬಹುದಾದ ಭಾರತದ ನಾಗರಿಕರ ರಕ್ಷಣೆಯ ಅಗತ್ಯತೆಯನ್ನು ಮತ್ತು ಇತರ ಸಂಬಂಧಪಟ್ಟ ಸಂದರ್ಭ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ವೃತ್ತಿಪರ ಅಥವಾ ಇತರ ಸ್ವರೂಪದ ಕೆಲಸ:

ಪರಂತು, ಸಾಮಾನ್ಯವಾಗಿ ಅಥವಾ ಯಾವುದೇ ನಿರ್ದಿಷ್ಟ ರಾಷ್ಟ್ರಕ್ಕೆ ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ಕೆಲಸದ ಪ್ರವರ್ಗಗಳ ಪೈಕಿ ಯಾವುದೇ ಪ್ರವರ್ಗದಲ್ಲಿನ ಅಥವಾ ಅದರ ಯಾವುದೇ ಉಪ ಪ್ರವರ್ಗದಲ್ಲಿನ ನಿಯೋಜನೆಗೆ ಸಂಬಂಧಪಟ್ಟಂತೆ ಅನ್ವಯವಾಗುವಂಥ ಸೇವಾ ಷರತ್ತುಗಳನ್ನು ಮತ್ತು ಇತರ ಸಂಬಂಧಪಟ್ಟ ಸಂದರ್ಭ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸದ ಅಂಥ ಪ್ರವರ್ಗವನ್ನು ಅಥವಾ ಕೆಲಸದ ಉಪಪ್ರವರ್ಗವನ್ನು ಈ ಪರಿಭಾಷೆಯ ಅರ್ಥವ್ಯಾಪ್ತಿಯೊಳಗೆ ಬರುವಂಥ ಕೆಲಸವೆಂಬುದಾಗಿ ಭಾವಿಸತಕ್ಕದ್ದಲ್ಲವೆಂದು ಅಧಿಸೂಚನೆಯ ಮೂಲಕ ಘೋಷಿಸುವುದು ಅವಶ್ಯಕವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಅದು ಹಾಗೆ ಮಾಡಬಹುದು.

(2) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿಲ್ಲದಂಥ ಯಾವುದೇ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಆ ಪ್ರದೇಶದಲ್ಲಿ ಯಾವುದಾದರೂ ಸಂವಾದಿ ಕಾನೂನು ಜಾರಿಯಲ್ಲಿದ್ದರೆ ಆ ಕಾನೂನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

## ಅಧ್ಯಾಯ II

## ವಲಸೆ ಪ್ರಾಧಿಕಾರಿಗಳು

**3. ವಲಸಿಗರ ಸಂರಕ್ಷಣಾಧಿಕಾರಿಗಳು.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ, ವಲಸಿಗರ ಮಹಾ ಸಂರಕ್ಷಣಾಧಿಕಾರಿಯನ್ನು ಮತ್ತು ಸೂಕ್ತವೆಂದು ತಾನು ಭಾವಿಸಬಹುದಾದಷ್ಟು ಸಂಖ್ಯೆಯ ವಲಸಿಗರ ಸಂರಕ್ಷಣಾಧಿಕಾರಿಗಳನ್ನು ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು.

(2) ಕೇಂದ್ರ ಸರ್ಕಾರವು ಹಾಗೆ ನೇಮಕಗೊಂಡ ವಲಸಿಗರ ಸಂರಕ್ಷಣಾಧಿಕಾರಿಗಳ ಅಧಿಕಾರ ವ್ಯಾಪ್ತಿಯು ಯಾವ ಪ್ರದೇಶಕ್ಕೆ ವಿಸ್ತರಿಸುತ್ತದೋ ಆ ಪ್ರದೇಶವನ್ನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸ್ಪಷ್ಟಪಡಿಸತಕ್ಕದ್ದು ಮತ್ತು ಒಂದೇ ಪ್ರದೇಶಕ್ಕೆ ಇಬ್ಬರು ಅಥವಾ ಹೆಚ್ಚು ವಲಸಿಗರ ಸಂರಕ್ಷಣಾಧಿಕಾರಿಗಳನ್ನು ನೇಮಕ ಮಾಡಿದ್ದರೆ ಅಂಥ ಪ್ರದೇಶದಲ್ಲಿ ಈ ಅಧಿನಿಯಮದ ಮೇರೆಗೆ ಅವರು ನಿರ್ವಹಿಸಬೇಕಾದ ಕೆಲಸವನ್ನು ವಿಂಗಡಣೆ ಮಾಡಿರುವುದನ್ನು ಹಾಗೂ ಹಂಚಿಕೆ ಮಾಡಿರುವುದನ್ನು ಸಹ ಅಂಥ ಆದೇಶದಲ್ಲಿ ಸ್ಪಷ್ಟಪಡಿಸತಕ್ಕದ್ದು.

(3) ವಲಸಿಗರ ಸಂರಕ್ಷಣಾಧಿಕಾರಿಗಳು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವರಿಗೆ ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ವಲಸಿಗರ ಮಹಾ ಸಂರಕ್ಷಣಾಧಿಕಾರಿಯ ಸಾಮಾನ್ಯ ಅಧೀಕ್ಷಣೆಯಲ್ಲಿ ಹಾಗೂ ನಿಯಂತ್ರಣದಲ್ಲಿ ನಿರ್ವಹಿಸತಕ್ಕದ್ದು.

(4) ವಲಸಿಗರ ಮಹಾ ಸಂರಕ್ಷಣಾಧಿಕಾರಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತನಗೆ ವಹಿಸಿರುವ ವಿಶೇಷ ಪ್ರಕಾರ್ಯಗಳ ಜೊತೆಗೆ, ವಲಸಿಗರ ಸಂರಕ್ಷಣಾಧಿಕಾರಿಗಳ ಪೈಕಿ ಯಾರೇ ಸಂರಕ್ಷಣಾಧಿಕಾರಿಗೆ ವಹಿಸಿರುವ ಎಲ್ಲಾ ಪ್ರಕಾರ್ಯಗಳನ್ನು ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

**4. ವಲಸಿಗರ ಸಂರಕ್ಷಣಾಧಿಕಾರಿಯ ಸಾಮಾನ್ಯ ಕರ್ತವ್ಯಗಳು.–** ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಬ್ಬ ವಲಸಿಗರ ಸಂರಕ್ಷಣಾಧಿಕಾರಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತನಗೆ ವಹಿಸಿರುವ ವಿಶೇಷ ಕರ್ತವ್ಯಗಳ ಜೊತೆಗೆ,–

(ಎ) ವಲಸೆ ಹೋಗಲಿಚ್ಛಿಸಿರುವ ಎಲ್ಲಾ ವಲಸಿಗರಿಗೆ ಮತ್ತು ವಲಸಿಗರಿಗೆ ರಕ್ಷಣೆ ಒದಗಿಸತಕ್ಕದ್ದು ಮತ್ತು ಅವರಿಗೆ ಸಲಹೆ ನೀಡಿ ನೆರವಾಗತಕ್ಕದ್ದು.

(ಬಿ) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲಾ ಉಪಬಂಧಗಳನ್ನು ತನಗೆ ಎಷ್ಟರಮಟ್ಟಿಗೆ ಪಾಲಿಸುವಂತೆ ಮಾಡಲು ಸಾಧ್ಯವಿದೆಯೋ ಅಷ್ಟರ ಮಟ್ಟಿಗೆ ಪಾಲಿಸುವಂತೆ ಮಾಡತಕ್ಕದ್ದು.

(ಸಿ) ನಿಯಮಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ,–

(i) ವಲಸಿಗನನ್ನು ಒಯ್ಯುವ ಯಾವುದೇ ವಾಹನವನ್ನು; ಅಥವಾ

(ii) ವಲಸೆ ಹೋಗಲು ಇಚ್ಛಿಸಿರುವ ವಲಸಿಗರು ಇತರ ಒಯ್ಯುವ ವಾಹನದ ಮೂಲಕ ಭಾರತದಿಂದ ಭಾರತದ ಹೊರಗಿನ ಸ್ಥಳಕ್ಕೆ ಹೋಗುತ್ತಿದ್ದಾರೆ ಎಂದು ಅಥವಾ ವಲಸಿಗರು ಅಂಥ ಇತರ ಒಯ್ಯುವ ವಾಹನದ ಮೂಲಕ ಭಾರತದ ಹೊರಗಿನ ಸ್ಥಳದಿಂದ ಭಾರತಕ್ಕೆ ಹಿಂದಿರುಗುತ್ತಿದ್ದಾರೆ ಎಂದು ನಂಬಲು ಅವನಿಗೆ ಕಾರಣವಿದ್ದರೆ ಅಂಥ ಯಾವುದೇ ಇತರ ಒಯ್ಯುವ ವಾಹನವನ್ನು

– ತಪಾಸಣೆ ಮಾಡತಕ್ಕದ್ದು;

(ಡಿ) ವಲಸಿಗರು, ನೌಕಾಯಾನ ಮಾಡುವಾಗ ಅಥವಾ ಪ್ರಯಾಣ ಮಾಡುವಾಗ ಮತ್ತು ಅವರು ಯಾವ ರಾಷ್ಟ್ರಕ್ಕೆ ವಲಸೆ ಹೋಗಿದ್ದರೋ ಆ ರಾಷ್ಟ್ರದಲ್ಲಿ ಅವರ ವಾಸ್ತವ್ಯದ ಅವಧಿಯಲ್ಲಿ ಮತ್ತು ಭಾರತಕ್ಕೆ ಹಿಂದಿರುಗಿ ಬರಲು ಅವರು ನೌಕಾಯಾನ ಮಾಡುವಾಗ ಅಥವಾ ಪ್ರಯಾಣ ಮಾಡುವಾಗ ಅವರನ್ನು ಯಾವ ರೀತಿ ನಡೆಸಿಕೊಳ್ಳಲಾಯಿತು ಎಂಬ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅದರ ಮೇಲಿನ ವರದಿಯನ್ನು ವಲಸಿಗರ ಮಹಾ ಸಂರಕ್ಷಣಾಧಿಕಾರಿಗೆ ಅಥವಾ ನಿಯಮಿಸಬಹುದಾದಂಥ ಇತರ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು;

(ಇ) ಭಾರತಕ್ಕೆ ಹಿಂದಿರುಗಿ ಬಂದಿರುವಂಥ ವಲಸಿಗರಿಗೆ ಸೂಕ್ತವಾಗಿ ತಾನು ನೀಡಬಹುದಾದಂಥ ನೆರವನ್ನು ಮತ್ತು ಸಲಹೆಯನ್ನು ನೀಡತಕ್ಕದ್ದು.

**5. ಸಂರಕ್ಷಣಾಧಿಕಾರಿಯ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ವ್ಯಕ್ತಿಗಳಿಗೆ ಅಧಿಕಾರ ನೀಡಲು ಅಧಿಕಾರ.–** ವಲಸಿಗರ ಅಥವಾ ವಲಸೆ ಹೋಗಲು ಇಚ್ಛಿಸಿರುವ ವಲಸಿಗರ ಹಿತದೃಷ್ಟಿಯಿಂದ, ಈ ಅಧಿನಿಯಮದ ಮೇರೆಗೆ ವಲಸಿಗರ ಸಂರಕ್ಷಣಾಧಿಕಾರಿಯ ಎಲ್ಲಾ ಪ್ರಕಾರ್ಯಗಳನ್ನು ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಯಾರೇ ವ್ಯಕ್ತಿಗೆ ಅಧಿಕಾರ ನೀಡುವುದು ಅವಶ್ಯಕವೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಅದು ಹಾಗೆ ಮಾಡಬಹುದು.

**6. ವಲಸೆ ತನಿಖಾ ಠಾಣೆಗಳು.–** (1) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯನ್ನು ತಡೆಯುವ ಅಥವಾ ತನಿಖೆ ಮಾಡುವ ದೃಷ್ಟಿಯಿಂದ, ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ, ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ವಲಸೆ ತನಿಖಾ ಠಾಣೆಗಳನ್ನು ಸ್ಥಾಪಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರವು ಭಾವಿಸಿದರೆ ಅದು ಅಧಿಸೂಚನೆಯ ಮೂಲಕ ಹಾಗೆ ಸ್ಥಾಪಿಸಬಹುದು.

(2) ಕೇಂದ್ರ ಸರ್ಕಾರವು, ಉಪಪ್ರಕರಣ (1)ರ ಮೇರೆಗೆ ಸ್ಥಾಪಿಸಿದ ವಲಸೆ ತನಿಖಾ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯನ್ನಾಗಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧಿಕಾರಿಯನ್ನು, ನೇಮಕ ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನೇಮಕ ಮಾಡಬಹುದು.

(3) ವಲಸೆ ತನಿಖಾಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು ಆ ವಲಸೆ ತನಿಖಾ ಠಾಣೆಯು ಯಾವ ವಲಸಿಗರ ಸಂರಕ್ಷಣಾಧಿಕಾರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಎಲ್ಲೆಗಳೊಳಗೆ ಇದೆಯೋ ಆ ವಲಸಿಗರ ಸಂರಕ್ಷಣಾಧಿಕಾರಿಯ ಸಾಮಾನ್ಯ ನಿಯಂತ್ರಣಕ್ಕೆ ಹಾಗೂ ಅಧೀಕ್ಷಣೆಗೆ ಒಳಪಟ್ಟಿರತಕ್ಕದ್ದು.

**7. ಇತರ ವಲಸೆ ಅಧಿಕಾರಿಗಳು ಮತ್ತು ಸಿಬ್ಬಂದಿ.–** ಕೇಂದ್ರ ಸರ್ಕಾರವು, ವಲಸಿಗರ ಮಹಾ ಸಂರಕ್ಷಣಾಧಿಕಾರಿಯು ಹಾಗೂ ವಲಸಿಗರ ಸಂರಕ್ಷಣಾಧಿಕಾರಿಗಳು ಈ ಅಧಿನಿಯಮದ ಮೇರೆಗೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಅವರಿಗೆ ನೆರವಾಗುವ ಸಲುವಾಗಿ ಸೂಕ್ತವೆಂದು ತಾನು ಭಾವಿಸಬಹುದಾದಷ್ಟು ಸಂಖ್ಯೆಯ ಅಂಥ ಇತರ ಅಧಿಕಾರಿಗಳನ್ನು ಮತ್ತು ನಿಯೋಜಿತರನ್ನು (ಇದರಲ್ಲಿ ಇನ್ನು ಮುಂದೆ ವಲಸೆ ಅಧಿಕಾರಿಗಳು ಮತ್ತು ವಲಸೆ ನಿಯೋಜಿತರೆಂದು ಉಲ್ಲೇಖಿಸಲಾಗಿದೆ) ನೇಮಕ ಮಾಡಬಹುದು.

**8. ವಲಸೆ ಅಧಿಕಾರಿಗಳು ಲೋಕ ನೌಕರರಾಗಿರುವುದು.–** ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವಲಸಿಗರ ಮಹಾ ಸಂರಕ್ಷಣಾಧಿಕಾರಿಗಳು, ವಲಸಿಗರ ಸಂರಕ್ಷಣಾಧಿಕಾರಿಗಳು, ವಲಸೆ ತನಿಖಾ ಠಾಣೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು, ವಲಸೆ ಅಧಿಕಾರಿಗಳು ಮತ್ತು ವಲಸೆ ನಿಯೋಜಿತರು ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಲೋಕನೌಕರರಾಗಿರತಕ್ಕದ್ದು.

## ಅಧ್ಯಾಯ III

## ನೌಕರಿ ಭರ್ತಿ ಏಜೆಂಟರ ನೋಂದಣಿ

**9. ನೋಂದಣಿ ಪ್ರಾಧಿಕಾರಿ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ವಲಸಿಗರ ಮಹಾ ಸಂರಕ್ಷಣಾಧಿಕಾರಿಯನ್ನು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯ ದರ್ಜೆಗಿಂತ ಹೆಚ್ಚಿನ ದರ್ಜೆಯ ಕೇಂದ್ರ ಸರ್ಕಾರದ ಯಾರೇ ಇತರ ಅಧಿಕಾರಿಯನ್ನು ನೋಂದಣಿ ಪ್ರಾಧಿಕಾರಿಯಾಗಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು.

**10. ಕಾನೂನು ಮಾನ್ಯ ಪ್ರಮಾಣಪತ್ರವಿಲ್ಲದ ಯಾವ ವ್ಯಕ್ತಿಯೂ ನೌಕರಿ ಭರ್ತಿ ಏಜೆಂಟನಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ಯಾರೇ ನೌಕರಿ ಭರ್ತಿ ಏಜೆಂಟನು ಈ ಅಧಿನಿಯಮ ಜಾರಿಗೆ ಬಂದ ತರುವಾಯ, ನೋಂದಣಿ ಪ್ರಾಧಿಕಾರಿಯು ನೌಕರಿ ಭರ್ತಿ ಸಂಬಂಧ ನೀಡಿದ ಪ್ರಮಾಣಪತ್ರಕ್ಕನುಸಾರವಾಗಿ ಮತ್ತು ಅದರ ಮೇರೆಗೆ ಹೊರತು ನೌಕರಿ ಭರ್ತಿ ಕಾರ್ಯವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನೌಕರಿ ಭರ್ತಿ ಕಾರ್ಯವನ್ನು ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ನಿಕಟಪೂರ್ವದಲ್ಲಿ ನೌಕರಿ ಭರ್ತಿ ಏಜೆಂಟನಾಗಿ ನೌಕರಿ ಭರ್ತಿ ವ್ಯವಹಾರ ಮಾಡುತ್ತಿದ್ದ ವ್ಯಕ್ತಿಯು, ಈ ಅಧಿನಿಯಮವು ಹಾಗೆ ಪ್ರಾರಂಭವಾದಂದಿನಿಂದ ಒಂದು ತಿಂಗಳ ಅವಧಿಯವರೆಗೆ ಅಂಥ ಪ್ರಮಾಣಪತ್ರವಿಲ್ಲದೆಯೇ ಆ ವ್ಯವಹಾರ ಮಾಡುವುದನ್ನು ಮುಂದುವರೆಸಿಕೊಂಡು ಹೋಗಬಹುದು ಮತ್ತು ಸದರಿ ಒಂದು ತಿಂಗಳ ಅವಧಿಯೊಳಗೆ ಈ ಅಧಿನಿಯಮದ ಮೇರೆಗೆ ಅಂಥ ಪ್ರಮಾಣಪತ್ರಕ್ಕಾಗಿ ಅವನು ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಆ ಅರ್ಜಿಯು ನಿಯಮಿಸಿದ ನಮೂನೆಯಲ್ಲಿ ಇದ್ದರೆ ಮತ್ತು ನಿಯಮಿಸಿದ ವಿವರಗಳನ್ನೊಳಗೊಂಡಿದ್ದರೆ ನೋಂದಣಿ ಪ್ರಾಧಿಕಾರಿಯು ಆ ಅರ್ಜಿಯನ್ನು ವಿಲೆ ಮಾಡುವವರೆಗೆ ಆ ವ್ಯಕ್ತಿಯು ನೌಕರಿ ಭರ್ತಿ ವ್ಯವಹಾರ ನಡೆಸುವುದನ್ನು ಮುಂದುವರೆಸಿಕೊಂಡು ಹೋಗಬಹುದು.

**11. ನೋಂದಣಿಗಾಗಿ ಅರ್ಜಿ.–** (1) ನೋಂದಣಿಗಾಗಿ ಅರ್ಜಿಯನ್ನು ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು ಮತ್ತು ಅದು ಅರ್ಜಿದಾರನ ಆರ್ಥಿಕ ಸುಸ್ಥಿತಿಗೆ, ವಿಶ್ವಾಸಾರ್ಹತೆಗೆ, ಅವನು ತನ್ನ ವ್ಯವಹಾರವನ್ನು ಯಾವ ಆವರಣಗಳಲ್ಲಿ ನಡೆಸಲು ಉದ್ದೇಶಿಸಿದ್ದಾನೆಯೋ ಆ ಆವರಣದೊಳಗೆ ನೌಕರಿಭರ್ತಿಗಾಗಿ ಅವನು ಕಲ್ಪಿಸಿರುವ ಸೌಲಭ್ಯಗಳಿಗೆ ಅವನ ಪೂರ್ವೋತ್ತರಗಳಿಗೆ (ಈ ಅಧ್ಯಾಯದ ಮೇರೆಗೆ ಅವನಿಗೆ ಯಾವುದಾದರೂ ಪ್ರಮಾಣಪತ್ರವನ್ನು ಈ ಮೊದಲೆ ನೀಡಲಾಗಿತ್ತೇ, ಮತ್ತು ಒಂದು ವೇಳೆ ನೀಡಿದ್ದರೆ, ಅಂಥ ಪ್ರಮಾಣಪತ್ರವನ್ನು ರದ್ದುಪಡಿಸಲಾಗಿದೆಯೇ ಎಂಬುದರ ಮಾಹಿತಿಯನ್ನೊಳಗೊಂಡು) ಮತ್ತು ನೌಕರಿ ಭರ್ತಿ ವ್ಯವಹಾರದಲ್ಲಿ ಅವನಿಗೆ ಹಿಂದಿನ ಅನುಭವವೇನಾದರೂ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ಸುಸಂಗತ ವಿಷಯಗಳನ್ನೊಳಗೊಂಡಿರತಕ್ಕದ್ದು ಮತ್ತು ನಿಯಮಿಸಿದ ಫೀಜನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ರಸೀತಿಯನ್ನು ಅದರ ಜೊತೆಗೆ ಇರಿಸಿರತಕ್ಕದ್ದು ಮತ್ತು ಅವನ ಸದ್ಯದ ಆರ್ಥಿಕ ಸ್ಥಿತಿಗತಿಯನ್ನು ತೋರಿಸುವಂಥ ಆಫಿಡಾವಿಟ್‌ನ್ನು ಮತ್ತು ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ನೀಡಿರುವ ಅಥವಾ ಅರ್ಜಿಯೊಂದಿಗೆ ನೀಡಿರುವ ಯಾವುದೇ ಮಾಹಿತಿಯು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸುಳ್ಳಾದುದೆಂದು ಅಥವಾ ಸರಿಯಾದುದಲ್ಲವೆಂದು ಕಂಡುಬಂದ ಸಂದರ್ಭದಲ್ಲಿ ನಿಯಮಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ಪ್ರಮಾಣಪತ್ರವು ಯಾವುದೇ ಕಾಲದಲ್ಲಿ ರದ್ದುಪಡಿಸುವುದಕ್ಕೆ ಗುರಿಯಾಗತಕ್ಕದೆಂದು ತಿಳಿಸಿರುವ, ನಿಯಮಿಸಿದ ನಮೂನೆಯಲ್ಲಿರುವ ಮುಚ್ಚಳಿಕೆಯನ್ನು ಅರ್ಜಿಯ ಜೊತೆಗೆ ಇರಿಸತಕ್ಕದ್ದು:

ಪರಂತು, ಪ್ರಕರಣ 14ರ ಉಪಪ್ರಕರಣ (6)ರ ಮೇರೆಗೆ ಅನರ್ಹನಾದಂಥ ವ್ಯಕ್ತಿಯು ಈ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯನ್ನು ಅಂಥ ಅನರ್ಹತಾ ಅವಧಿಯು ಮುಕ್ತಾಯವಾಗುವವರೆಗೆ ಪುರಸ್ಕರಿಸತಕ್ಕದ್ದಲ್ಲ.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನೋಂದಣಿ ಪ್ರಾಧಿಕಾರಿಯು,–

(ಎ) ಅರ್ಜಿಯು ನಿಯಮಿಸಿದ ನಮೂನೆಯಲ್ಲಿ ಇರದಿದ್ದರೆ ಅಥವಾ ನಿಯಮಿಸಿದ ವಿವರಗಳಲ್ಲಿ ಯಾವುದನ್ನಾದರೂ ಒಳಗೊಂಡಿರದಿದ್ದರೆ, ಆ ಅರ್ಜಿಯನ್ನು ಅರ್ಜಿದಾರನಿಗೆ ಹಿಂತಿರುಗಿಸತಕ್ಕದ್ದು.

(ಬಿ) ಅರ್ಜಿಯು ನಿಯಮಿಸಿದ ನಮೂನೆಯಲ್ಲಿದ್ದರೆ ಮತ್ತು ನಿಯಮಿಸಿದ ವಿವರಗಳನ್ನು ಒಳಗೊಂಡಿದ್ದರೆ, ಅರ್ಜಿದಾರನು ಯಾವ ಪ್ರಮಾಣಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದಾನೋ ಆ ಪ್ರಮಾಣಪತ್ರದ ನೀಡಿಕೆಗೆ ಅವನು ಅರ್ಹನಾಗಿದ್ದಾನೆಂದು ಅವನಿಗೆ ತಿಳಿಸತಕ್ಕದ್ದು ಮತ್ತು ಅರ್ಜಿದಾರನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಅರ್ಜಿದಾರನು ಭದ್ರತೆಯಾಗಿ ಕೊಡಬೇಕಾದ ಹಣವನ್ನು ಉಪಪ್ರಕರಣ (3)ರ ಮೇರೆಗೆ ನಿರ್ಧರಿಸತಕ್ಕದ್ದು.

(3) ನೋಂದಣಿ ಪ್ರಾಧಿಕಾರಿಯು, ಉಪಪ್ರಕರಣ (2)ರ ಮೇರೆಗೆ ಅರ್ಜಿದಾರನಿಗೆ ನೀಡಲು ಉದ್ದೇಶಿಸಿರುವ ಪ್ರಮಾಣಪತ್ರದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಯಥೋಚಿತ್ತವಾಗಿ ಪಾಲಿಸುವಂತೆ ಮಾಡುವ ಸಲುವಾಗಿ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸುವಂತೆ ಮಾಡುವ ಸಲುವಾಗಿ ಮತ್ತು ಯಾವ ವಲಸಿಗರು ಅರ್ಜಿದಾರನ ಮೂಲಕ ನೌಕರಿಗೆ ಭರ್ತಿಯಾಗಬಹುದೋ ಅಂಥ ವಲಸಿಗರಲ್ಲಿ ಯಾರನ್ನಾದರೂ ಭಾರತಕ್ಕೆ ಹಿಮ್ಮರಳಿಸುವ ಸಂಬಂಧದಲ್ಲಿ ಮಾಡಬಹುದಾದ ಖರ್ಚುವೆಚ್ಚಗಳನ್ನು ಭರಿಸುವ ಸಲುವಾಗಿ ಭದ್ರತೆಯಾಗಿ ನೀಡಬೇಕಾದ ಹಣವನ್ನು (ಯಾವುದೇ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಿರದ ಹಣವನ್ನು) ಈ ಬಗ್ಗೆ ರಚಿಸಿದ ನಿಯಮಗಳಿಗನುಸಾರವಾಗಿ ನಿರ್ಧರಣೆ ಮಾಡತಕ್ಕದ್ದು ಮತ್ತು ಆ ಹಣವನ್ನು ಅರ್ಜಿದಾರನು ತುಂಬತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ನಿರ್ಧರಣೆ ಮಾಡಿದ ಭದ್ರತೆಯ ಹಣವನ್ನು ನೋಂದಣಿ ಪ್ರಾಧಿಕಾರಿಯು, ಅಂಥ ಭದ್ರತೆಯ ಹಣವನ್ನು ನೀಡುವಂತೆ ಅಗತ್ಯಪಡಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ, ಅರ್ಜಿದಾರನು ನಿಯಮಿಸಿದ ರೀತಿಯಲ್ಲಿ ಸಂದಾಯ ಮಾಡಿದರೆ, ಅರ್ಜಿದಾರನು ಯಾವ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವನೋ ಆ ಪ್ರಮಾಣಪತ್ರವನ್ನು ಮತ್ತು ಅದರೊಂದಿಗೆ ಅಗತ್ಯಪಡಿಸಿದ ಭದ್ರತೆಯ ಹಣವನ್ನು ಅವನು ಸಂದಾಯ ಮಾಡಿದ್ದಾನೆ ಎಂಬ ಬಗ್ಗೆ ಹಿಂಬರಹವನ್ನು ಅವನಿಗೆ ಕೊಡತಕ್ಕದ್ದು.

(5) ಅರ್ಜಿದಾರನು ಉಪಪ್ರಕರಣ (4)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅಗತ್ಯಪಡಿಸಿದ ಭದ್ರತೆಯ ಹಣವನ್ನು ಸಂದಾಯ ಮಾಡಲು ವಿಫಲನಾದರೆ, ಆ ಅವಧಿ ಮುಕ್ತಾಯವಾದ ದಿನಾಂಕದಂದು ನೋಂದಣಿ ಪ್ರಾಧಿಕಾರಿಯು ಅವನ ಅರ್ಜಿಯನ್ನು ತಿರಿಸ್ಕರಿಸಿದ್ದಾನೆ ಎಂದು ಭಾವಿಸತಕ್ಕದ್ದು.

**12. ನೋಂದಣಿಯ ಷರತ್ತುಗಳು ಮತ್ತು ನಿಬಂಧನೆಗಳು.–** ಪ್ರಕರಣ 11ರ ಮೇರೆಗೆ ನೀಡಿದ ಪ್ರಮಾಣಪತ್ರವು,–

(ಎ) ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು;

(ಬಿ) ಐದು ವರ್ಷಗಳಿಗೆ ಮೀರದಂಥ, ನಿಯಮಿಸಬಹುದಾದಂಥ ಅವಧಿಯವರೆಗೆ ಕಾನೂನು ಮಾನ್ಯತೆಯನ್ನು ಹೊಂದಿರತಕ್ಕದ್ದು:

ಪರಂತು, ಪ್ರಮಾಣಪತ್ರವನ್ನು,–

(i) ಅದನ್ನು ಯಾರಿಗೆ ನೀಡಲಾಗಿದೆಯೋ ಆ ವ್ಯಕ್ತಿಯು ನಿಯಮಿಸಿದ ಅವಧಿಗಿಂತ ಕಡಿಮೆ ಅವಧಿಗೆ ನೀಡಬೇಕೆಂದು ಅಪೇಕ್ಷಿಸಿದ್ದರೆ; ಅಥವಾ

(ii) ನೋಂದಣಿ ಪ್ರಾಧಿಕಾರಿಯು ಯಾವುದೇ ಪ್ರಕರಣದಲ್ಲಿ ಪ್ರಮಾಣಪತ್ರವನ್ನು ಕಡಿಮೆ ಅವಧಿಗೆ ನೀಡತಕ್ಕದೆಂದು ನಿರ್ಧರಿಸಿ ಅದಕ್ಕೆ ಕಾರಣಗಳನ್ನು ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸಿದ್ದರೆ

– ಅಂಥ ಸಂದರ್ಭದಲ್ಲಿ, ನಿಯಮಿಸಿದ ಅವಧಿಗಿಂತ ಕಡಿಮೆ ಅವಧಿಗೆ ನೀಡಬಹುದು.

(ಸಿ) ವಿಶೇಷವಾಗಿ, ನೌಕರಿ ಭರ್ತಿಗೆ ಸಂಬಂಧಿಸಿದಂತೆ ಅವನು ನಡೆಸಿದ ಹಣಕಾಸು ವ್ಯವಹಾರಗಳ ವಿವರಗಳನ್ನು ಅವನಿಂದ ನೌಕರಿಗೆ ಭರ್ತಿಯಾದ ವ್ಯಕ್ತಿಗಳ ಅಥವಾ ವಲಸೆ ಹೋಗಲು ಅವನಿಂದ ನೆರವು ಪಡೆದ ವ್ಯಕ್ತಿಗಳ, ಸಂಬಂಧಪಟ್ಟ ನಿಯೋಜಕರ, ನೌಕರಿ ಭರ್ತಿ ಸಂಬಂಧದಲ್ಲಿ ಮಾಡಿಕೊಂಡ ಕರಾರುಗಳ ಮತ್ತು ಒಪ್ಪಂದಗಳ ವಿವರಗಳನ್ನು ಒಳಗೊಂಡ ನಿಯಮಿಸಿದ ದಾಖಲೆಗಳನ್ನು ಪ್ರಮಾಣಪತ್ರಧಾರಕನು ಇಡುವುದೂ ಒಳಗೊಂಡಂತೆ ನಿಯಮಿಸಬಹುದಾದಂಥ ಇತರ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಪ್ರಮಾಣಪತ್ರವು, ನಿಯಮಿಸಿದ ನಿಬಂಧನೆಗಳ ಮತ್ತು ಷರತ್ತುಗಳ ಜೊತೆಗೆ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವಂತೆ ಮಾಡುವ ಸಲುವಾಗಿ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ನೋಂದಣಿ ಪ್ರಾಧಿಕಾರಿಯು ವಿಧಿಸಬಹುದಾದಂಥ ಇತರ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಸಹ ಒಳಗೊಂಡಿರಬಹುದು.

**13. ನೋಂದಣಿಯ ನವೀಕರಣ.–** ಪ್ರಮಾಣಪತ್ರವನ್ನು ಕಾಲಕಾಲಕ್ಕೆ ನವೀಕರಿಸಬಹುದು ಮತ್ತು ಈ ಅಧಿನಿಯಮದ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳು (ಫೀಜಿಗೆ ಸಂಬಂಧಿಸಿದ ಉಪಬಂಧಗಳನ್ನೊಳಗೊಂಡಂತೆ) ಪ್ರಮಾಣಪತ್ರದ ನೀಡಿಕೆಗೆ ಹೇಗೆ ಅನ್ವಯವಾಗುತ್ತವೆಯೋ ಅದೇ ರೀತಿಯಲ್ಲಿ ಪ್ರಮಾಣಪತ್ರದ ನವೀಕರಣಕ್ಕೂ ಅನ್ವಯವಾಗತಕ್ಕದ್ದು:

ಪರಂತು, ಪ್ರಮಾಣಪತ್ರವನ್ನು ನವೀಕರಿಸಿರದಿದ್ದರೆ, ಅದರ ಕಾನೂನು ಮಾನ್ಯತೆಯು ಯಾವ ದಿನಾಂಕದಂದು ಕೊನೆಗೊಳ್ಳುತ್ತಿತ್ತೋ ಆ ದಿನಾಂಕಕ್ಕೆ ಮೂರು ತಿಂಗಳಿಗೆ ಕಡಿಮೆ ಇಲ್ಲದಷ್ಟು ಅವಧಿ ಮೊದಲು ಅದರ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದ ಹೊರತು ಯಾವುದೇ ಪ್ರಮಾಣಪತ್ರವನ್ನು ನವೀಕರಿಸತಕ್ಕದ್ದಲ್ಲ:

ಮತ್ತು ಪರಂತು, ಸಾಕಷ್ಟು ಕಾರಣಗಳಿಂದಾಗಿ ಸದರಿ ಅವಧಿಗೆ ಮೊದಲು ಅಂತಹ ಅರ್ಜಿಯನ್ನು ಸಲ್ಲಿಸಲು ತನಗೆ ಸಾಧ್ಯವಾಗಲಿಲ್ಲವೆಂದು ಅರ್ಜಿದಾರನು ನೋಂದಣಿ ಪ್ರಾಧಿಕಾರಿಗೆ ಮನವರಿಕೆ ಮಾಡಿಕೊಟ್ಟರೆ, ಪ್ರಮಾಣಪತ್ರವನ್ನು ನವೀಕರಿಸದಿದ್ದರೆ ಅದರ ಕಾನೂನು ಮಾನ್ಯತೆಯು ಯಾವ ದಿನಾಂಕದಂದು ಕೊನೆಗೊಳ್ಳುತ್ತಿತ್ತೋ ಆ ದಿನಾಂಕಕ್ಕೆ ಮೊದಲಿನ ಮೂರು ತಿಂಗಳ ಅವಧಿಯಲ್ಲಿ ಯಾವುದೇ ಕಾಲದಲ್ಲಿ ಪ್ರಮಾಣಪತ್ರದ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ನೋಂದಣಿ ಪ್ರಾಧಿಕಾರಿಯು ಪುರಸ್ಕರಿಸಬಹುದು.

**14. ಪ್ರಮಾಣಪತ್ರವನ್ನು ರದ್ದುಪಡಿಸುವುದು, ಅಮಾನತ್ತಿನಲ್ಲಿ ಇಡುವುದು, ಇತ್ಯಾದಿ.–** (1) ನೋಂದಣಿ ಪ್ರಾಧಿಕಾರಿಯು, ಈ ಮುಂದಿನ ಕಾರಣಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಅಂದರೆ:–

(ಎ) ಪ್ರಮಾಣಪತ್ರಧಾರಕನು ತನ್ನ ವ್ಯವಹಾರವನ್ನು ಯಾವ ರೀತಿಯಲ್ಲಿ ನಡೆಸಿರುವನೋ ಆ ರೀತಿಯನ್ನು ಅಥವಾ ಅವನ ಹಣಕಾಸು ಸ್ಥಿತಿ ಕುಸಿಯುತ್ತಿರುವುದನ್ನು, ನೌಕರಿಭರ್ತಿಗಾಗಿ ಅವನು ಕಲ್ಪಿಸಿರುವ ಸೌಲಭ್ಯಗಳನ್ನು

ಗಮನಿಸಿದರೆ, ಪ್ರಮಾಣಪತ್ರಧಾರಕನು ಪ್ರಮಾಣಪತ್ರಧಾರಣ ಮಾಡಿರುವುದನ್ನು ಮುಂದುವರಿಸುವುದಕ್ಕೆ ಯೋಗ್ಯ ವ್ಯಕ್ತಿಯಲ್ಲ ಎಂಬ;

(ಬಿ) ಪ್ರಮಾಣಪತ್ರಧಾರಕನು, ಭಾರತದ ಹಿತಾಸಕ್ತಿಗಳಿಗೆ ಬಾಧಕವಾಗುವಂಥ ಉದ್ದೇಶಗಳಿಗಾಗಿ ಅಥವಾ ಸಾರ್ವಜನಿಕ ನೀತಿಗೆ ವಿರುದ್ಧವಾದ ಉದ್ದೇಶಗಳಿಗಾಗಿ ವಲಸಿಗರನ್ನು ನೌಕರಿಗೆ ಭರ್ತಿ ಮಾಡಿದ್ದಾನೆಂಬ;

(ಸಿ) ಪ್ರಮಾಣಪತ್ರಧಾರಕನು, ಪ್ರಮಾಣಪತ್ರವನ್ನು ಪಡೆದ ತರುವಾಯ ನೈತಿಕ ಅಧಃಪತನವನ್ನು ಒಳಗೊಂಡ ಯಾವುದೇ ಅಪರಾಧಕ್ಕಾಗಿ ಭಾರತದಲ್ಲಿ ಅಪರಾದಿ üಎಂದು ನಿರ್ಣೀತನಾಗಿದ್ದಾನೆಂಬ;

(ಡಿ) ಪ್ರಮಾಣಪತ್ರಧಾರಕನು, ಪ್ರಮಾಣಪತ್ರವನ್ನು ಪಡೆದ ತರುವಾಯ ಈ ಅಧಿನಿಯಮದ ಮೇರೆಗಿನ, ವಲಸೆ ಅಧಿನಿಯಮ, 1922 (1922ರ 7)ರ ಮೇರೆಗಿನ ಅಥವಾ ಪಾಸ್‌ಪೋರ್ಟುಗಳಿಗೆ ವಿದೇಶಿ ವಿನಿಮಯಕ್ಕೆ, ಔಷಧಗಳಿಗೆ, ನಿದ್ರಾಜನಕಗಳಿಗೆ ಅಥವಾ ಕಳ್ಳಸಾಗಣಿಕೆಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿನ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಭಾರತದಲ್ಲಿನ ನ್ಯಾಯಾಲಯದಿಂದ ಅಪರಾಧಿ ಎಂದು ನಿರ್ಣೀತನಾಗಿದ್ದು, ಆ ಅಪರಾಧದ ಸಂಬಂಧದಲ್ಲಿ ಆರು ತಿಂಗಳಿಗಿಂತ ಕಡಿಮೆಯಿಲ್ಲದಷ್ಟು ಅವಧಿಯ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದಾನೆಂಬ;

(ಇ) ತಪ್ಪು ನಿರೂಪಣೆ ಮಾಡಿ ಅಥವಾ ಯಾವುದೇ ಮುಖ್ಯ ವಿಷಯವನ್ನು ಮುಚ್ಚಿಟ್ಟು ಪ್ರಮಾಣಪತ್ರವನ್ನು ಪಡೆದುಕೊಳ್ಳಲಾಗಿದೆ ಅಥವಾ ನವೀಕರಿಸಿಕೊಳ್ಳಲಾಗಿದೆ ಎಂಬ;

(ಎಫ್) ಪ್ರಮಾಣಪತ್ರದ ನಿಬಂಧನೆಗಳಲ್ಲಿ ಮತ್ತು ಷರತ್ತುಗಳಲ್ಲಿ ಯಾವುದನ್ನಾದರೂ ಪ್ರಮಾಣಪತ್ರಧಾರಕನು ಉಲ್ಲಂಘಿಸಿದ್ದಾನೆಂಬ;

(ಜಿ) ಯಾವುದೇ ವಿದೇಶದೊಂದಿಗೆ ಭಾರತವು ಹೊಂದಿರುವ ಸ್ನೇಹಮಯ ಸಂಬಂಧಗಳ ಹಿತದೃಷ್ಟಿಯಿಂದ ಅಥವಾ ಜನಸಾಮಾನ್ಯರ ಹಿತದೃಷ್ಟಿಯಿಂದ ಪ್ರಮಾಣಪತ್ರವನ್ನು ರದ್ದುಪಡಿಸುವುದು ಅವಶ್ಯಕವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಿದೆ ಎಂಬ

– ಕಾರಣದ ಮೇಲೆ ಯಾವುದೇ ಪ್ರಮಾಣಪತ್ರವನ್ನು ರದ್ದುಪಡಿಸಬಹುದೇ ಹೊರತು ಬೇರೆ ಯಾವುದೇ ಕಾರಣಗಳ ಮೇಲೆ ಅಲ್ಲ.

(2) ನೋಂದಣಿ ಪ್ರಾಧಿಕಾರಿಯು, ಉಪಪ್ರಕರಣ (1)ರಲ್ಲಿ ತಿಳಿಸಿರುವ ಕಾರಣಗಳಲ್ಲಿ ಯಾವುದೇ ಕಾರಣದ ಮೇಲೆ ಯಾವುದೇ ಪ್ರಮಾಣಪತ್ರವನ್ನು ರದ್ದುಪಡಿಸುವ ವಿಷಯವನ್ನು ಪ್ಯಾಲೋಚಿಸುವವರೆಗೆ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂವತ್ತು ದಿವಸಗಳಿಗೆ ಮೀರದ ಅವಧಿಗೆ ಪ್ರಮಾಣಪತ್ರವು ಚಾಲ್ತಿಯಲ್ಲಿರುವುದನ್ನು ಅಮಾನತ್ತಿನಲ್ಲಿಡುವುದು ಅವಶ್ಯಕವೆಂದು ನೋಂದಣಿ ಪ್ರಾಧಿಕಾರಿಗೆ ಮನವರಿಕೆಯಾದರೆ, ಅವನು ಹಾಗೆ ಮಾಡಬಹುದು ಮತ್ತು ಪ್ರಮಾಣಪತ್ರವನ್ನು ಅಮಾನತ್ತಿನಲ್ಲಿ ಇಟ್ಟಿರುವುದನ್ನು ನೋಂದಣಿಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದ ವಿಷಯವನ್ನು ನಿರ್ಧರಣೆ ಮಾಡುವವರೆಗೆ ಏಕೆ ಮುಂದುವರಿಸಬಾರದು ಎಂಬುದಕ್ಕೆ ಅಂತಹ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಕಾರಣ ತೋರಿಸುವಂತೆ ಪ್ರಮಾಣಪತ್ರಧಾರಕನನ್ನು ಅಗತ್ಯಪಡಿಸಬಹುದು ಮತ್ತು ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(3) ಈ ಅಧಿನಿಯಮದ ಮೇರೆಗಿನ, ಅಪರಾಧಕ್ಕಾಗಿ ಪ್ರಮಾಣಪತ್ರಧಾರಕನನ್ನು ಅಪರಾಧಿ ಎಂದು ನಿರ್ಣಯಿಸುವಂಥ ನ್ಯಾಯಾಲಯವು ಪ್ರಮಾಣಪತ್ರವನ್ನು ಸಹ ರದ್ದುಪಡಿಸಬಹುದು:

ಪರಂತು, ಅಪರಾಧಿ ಎಂದು ನಿರ್ಣಯಿಸಿರುವುದನ್ನು, ಅಪೀಲಿನಲ್ಲಿ ಅಥವಾ ಅನ್ಯಥಾ ರದ್ದುಪಡಿಸಿದರೆ ಉಪಪ್ರಕರಣ (3)ರ ಮೇರೆಗೆ ಪ್ರಮಾಣಪತ್ರವನ್ನು ರದ್ದುಪಡಿಸಿರುವುದು ಅನೂರ್ಜಿತವಾಗತಕ್ಕದ್ದು.

(4) ಅಪೀಲು ನ್ಯಾಯಾಲಯವು ಅಥವಾ ಪುನರೀಕ್ಷಣೆ ಮಾಡಲು ತನಗಿರುವ ಅಧಿಕಾರಗಳನ್ನು ಚಲಾಯಿಸುವ ನ್ಯಾಯಾಲಯವು ಉಪಪ್ರಕರಣ (3)ರ ಮೇರೆಗೆ ಪ್ರಮಾಣಪತ್ರವನ್ನು ರದ್ದುಪಡಿಸುವ ಆದೇಶವನ್ನು ಮಾಡಬಹುದು.

(5) ಪ್ರಮಾಣಪತ್ರವನ್ನು ರದ್ದು ಮಾಡುವ ಅಥವಾ ಅಮಾನತ್ತಿನಲ್ಲಿಡುವ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ನೋಂದಣಿ ಪ್ರಾಧಿಕಾರಿಯು ಅಥವಾ ಸಂದರ್ಭನುಸಾರ ನ್ಯಾಯಾಲಯವು, ಪ್ರಮಾಣಪತ್ರಧಾರಕನು ನೌಕರಿ ಭರ್ತಿ ಏಜೆಂಟನಾಗಿ ತನ್ನ ವ್ಯವಹಾರವನ್ನು ನಡೆಸುವಾಗ ಯಾವ ವಲಸಿಗರೊಂದಿಗೆ ಮತ್ತು ಇತರ ವ್ಯಕ್ತಿಗಳೊಂದಿಗೆ ಯಾವುದೇ ವ್ಯವಹಾರವನ್ನು ನಡೆಸಿದ್ದನೋ ಆ ವಲಸಿಗರ ಮತ್ತು ಇತರ ವ್ಯಕ್ತಿಗಳ ಹಿತಾಸಕ್ತಿಯನ್ನು ಕಾಪಾಡಲು ಯಾವ ಏರ್ಪಾಟುಗಳನ್ನು ಮತ್ತು ವ್ಯವಸ್ಥೆಗಳನ್ನು ಮಾಡಬೇಕಾಗಿತ್ತು ಎಂಬ ವಿಷಯವನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಈ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು (ಅಂಥ ಎಲ್ಲಾ ಅಥವಾ ಯಾರೇ ವಲಸಿಗರಿಗೆ ಮತ್ತು ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅವನ ವ್ಯವಹಾರ ನಡೆಸುವುದನ್ನು ಮುಂದುವರಿಸಿಕೊಂಡು ಹೋಗಲು ಪ್ರಮಾಣಪತ್ರಧಾರಕನಿಗೆ ಅನುಮತಿ ನೀಡುವ ಆದೇಶಗಳು ಸೇರಿದಂತೆ) ಮಾಡಬಹುದು.

(6) ಯಾರೇ ವ್ಯಕ್ತಿಗೆ ನೀಡಿದ ಪ್ರಮಾಣಪತ್ರವನ್ನು ಈ ಪ್ರಕರಣದ ಮೇರೆಗೆ ರದ್ದುಪಡಿಸಿದರೆ, ಅಂಥ ವ್ಯಕ್ತಿಯು ಅಂಥ ರದ್ದಿಯಾತಿಯ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾಗುವವರೆಗೂ ಈ ಅಧ್ಯಾಯದ ಮೇರೆಗೆ ಮತ್ತೊಂದು ಪ್ರಮಾಣಪತ್ರಕ್ಕಾಗಿ ಯಾವುದೇ ಅರ್ಜಿಯನ್ನು ಸಲ್ಲಿಸುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

## ಅಧ್ಯಾಯ IV

## ನೌಕರಿಭರ್ತಿ ಮಾಡಿಕೊಳ್ಳುವುದಕ್ಕಾಗಿ ನಿಯೋಜಕರಿಗೆ ಪರ್ಮಿಟ್‌ಗಳು

**15. ಸಕ್ಷಮ ಪ್ರಾಧಿಕಾರಿ.–** (1) ಕೇಂದ್ರ ಸರ್ಕಾರವು ವಲಸಿಗರ ಮಹಾ ಸಂರಕ್ಷಣಾಧಿಕಾರಿಯನ್ನು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯ ದರ್ಜೆಗಿಂತ ಹೆಚ್ಚಿನ ದರ್ಜೆಯ ಕೇಂದ್ರ ಸರ್ಕಾರದ ಯಾರೇ ಇತರ ಅಧಿಕಾರಿಯನ್ನು ಈ ಅಧ್ಯಾಯದ ಮೇರೆಗೆ ಪರ್ಮಿಟ್ ನೀಡಿಕೆ ಅಧಿಕಾರಿಯೆಂದು (ಇದರಲ್ಲಿ ಇನ್ನು ಮುಂದೆ ಸಕ್ಷಮ ಪ್ರಾಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಸಕ್ಷಮ ಪ್ರಾಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ನಿಯೋಜನೆಗಾಗಿ ಭಾರತದ ಯಾರೇ ನಾಗರಿಕನನ್ನು ನೌಕರಿಗೆ ಭರ್ತಿ ಮಾಡುವ ಉದ್ದೇಶಕ್ಕಾಗಿ ಭಾರತದ ನಾಗರಿಕರಲ್ಲದ ನಿಯೋಜಕರಿಗೆ ಈ ಅಧ್ಯಾಯದ ಮೇರೆಗೆ ಪರ್ಮಿಟ್‌ಗಳನ್ನು ನೀಡಲು, ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿ ನಿಯೋಜಿತನಾಗಿರುವ ಯಾರೇ ವ್ಯಕ್ತಿಗೆ ಅಧಿಸೂಚನೆಯ ಮೂಲಕ ಅಧಿಕಾರ ನೀಡಬಹುದು ಮತ್ತು ಹಾಗೆ ಅಧಿಕಾರ ಪಡೆದ ವ್ಯಕ್ತಿಯು ಈ ಅಧ್ಯಾಯದ ಮೇರೆಗೆ ಅವನು ನೀಡಿದ ಪ್ರತಿಯೊಂದು ಪರ್ಮಿಟ್‌ನ ಯಥೋಚಿತವಾಗಿ ಪ್ರಮಾಣೀಕರಿಸಿದ ಪ್ರತಿಯನ್ನು ವಲಸಿಗರ ಮಹಾ ಸಂರಕ್ಷಣಾಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

**16. ನೌಕರಿಗೆ ಭರ್ತಿ ಮಾಡುವ ಏಜೆಂಟರ ಮೂಲಕ ಅಥವಾ ಪರ್ಮಿಟ್ಟಿನ ಮೇರೆಗೆ ನಿಯೋಜಕರಿಂದ ನೌಕರಿಗೆ ಭರ್ತಿ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನುಳಿದು ಯಾರೇ ನಿಯೋಜಕನು.–

(ಎ) ನೌಕರಿಗೆ ಭರ್ತಿ ಮಾಡಲು ಈ ಅಧಿನಿಯಮದ ಮೇರೆಗೆ ಸಕ್ಷಮನಾದ, ನೌಕರಿ ಭರ್ತಿ ಮಾಡುವ ಏಜೆಂಟನ ಮೂಲಕ ಹೊರತು; ಅಥವಾ

(ಬಿ) ಈ ಅಧ್ಯಾಯದ ಮೇರೆಗೆ ಈ ಸಂಬಂಧದಲ್ಲಿ ನೀಡಿದ ಕಾನೂನು ಮಾನ್ಯವಾದ ಪರ್ಮಿಟ್ಟಿಗೆ ಅನುಸಾರವಾಗಿ, ಹೊರತು

– ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ನಿಯೋಜನೆಗಾಗಿ ಭಾರತದ ಯಾರೇ ನಾಗರಿಕನನ್ನು ಹಾಗೆ ನೌಕರಿಗೆ ಭರ್ತಿ ಮಾಡಿಕೊಳ್ಳತಕ್ಕದ್ದಲ್ಲ.

**17. ಪರ್ಮಿಟ್ಟುಗಳನ್ನು ಪಡೆಯಲು ಕಾರ್ಯವಿಧಾನ.–** (1) ಈ ಅಧ್ಯಾಯದ ಮೇರೆಗೆ ಪರ್ಮಿಟ್ಟನ್ನು ಪಡೆಯಲು ಇಚ್ಛಿಸುವ ನಿಯೋಜಕನು ಅದಕ್ಕಾಗಿ ಅರ್ಜಿಯನ್ನು, ನಿಯಮಿಸಿದ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರಿಗೆ ಸಲ್ಲಿಸಬಹುದು.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು, ಈ ಬಗ್ಗೆ ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು ಅವನು ಅವಶ್ಯಕವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಕೋರಿರುವ ಪರ್ಮಿಟ್ಟನ್ನು ಮಂಜೂರು ಮಾಡತಕ್ಕದ್ದು ಅಥವಾ ಅರ್ಜಿಯನ್ನು ತಿರಸ್ಕರಿಸತಕ್ಕದ್ದು:

ಪರಂತು, ಪರ್ಮಿಟನ್ನು ಮಂಜೂರು ಮಾಡುವುದಕ್ಕೂ ಮೊದಲು, ಭದ್ರತೆಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ಷರತ್ತುಗಳು ಮತ್ತು ಅರ್ಜಿದಾರನು ನೌಕರಿಗೆ ಭರ್ತಿ ಮಾಡಿಕೊಳ್ಳುವ ಸಂಭವ ಇರುವಂಥ ಭಾರತದ ನಾಗರಿಕರ ಹಿತದೃಷ್ಟಿಯಿಂದ ಇತರ ಷರತ್ತುಗಳು ಅವಶ್ಯವೆಂದು ಸಕ್ಷಮ ಪ್ರಾಧಿಕಾರಿಯು, ಭಾವಿಸಿದರೆ ಕಾರಣಗಳನ್ನು ದಾಖಲಿಸಿ ಅಂಥ ಷರತ್ತುಗಳು ಸೇರಿದಂತೆ ನಿಯಮಿಸಬಹುದಾದಂಥ ಷರತ್ತುಗಳನ್ನು ಪಾಲಿಸುವಂತೆ ಸಕ್ಷಮ ಪ್ರಾಧಿಕಾರಿಯು ಅರ್ಜಿದಾರನನ್ನು ಅಗತ್ಯಪಡಿಸಬಹುದು.

(3) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಸಕ್ಷಮ ಪ್ರಾಧಿಕಾರಿಯು, ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಈ ಮುಂದಿನ ಕಾರಣಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಎಂದರೆ:–

(ಎ) ಅರ್ಜಿಯು ಎಲ್ಲಾ ರೀತಿಯಿಂದ ಸಂಪೂರ್ಣವಾಗಿಲ್ಲ ಎಂಬ ಅಥವಾ ಅರ್ಜಿಯಲ್ಲಿ ನೀಡಿರುವ ಮುಖ್ಯ ವಿವರಗಳು ಸರಿಯಾದವುಗಳು ಆಗಿಲ್ಲ ಎಂಬ ಕಾರಣದ ಮೇಲೆ;

(ಬಿ) ಅರ್ಜಿದಾರನು ನೌಕರಿಗೆ ಭರ್ತಿ ಮಾಡಿಕೊಂಡಿರುವ ಅಥವಾ ನೌಕರಿಗೆ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಿರುವ ವ್ಯಕ್ತಿಗಳಿಗೆ ಕೊಡುವುದಾಗಿ ಅವನು ಪ್ರಸ್ತಾಪಿಸಿರುವ ನಿಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳು ತಾರತಮ್ಯದಿಂದ ಕೂಡಿದವುಗಳು ಅಥವಾ ಶೋಷಣೆಗೆ ಗುರಿಪಡಿಸುವಂಥವುಗಳು ಆಗಿವೆ ಎಂಬ ಕಾರಣದ ಮೇಲೆ;

(ಸಿ) ಅರ್ಜಿದಾರನು ಕೊಡುವುದಾಗಿ ಪ್ರಸ್ತಾಪಿಸಿರುವ ನಿಯೋಜನೆಯು ಯಾವ ಕೆಲಸವು ಭಾರತದ ಕಾನೂನುಗಳಿಗನುಸಾರವಾಗಿ ಕಾನೂನುಬಾಹಿರವಾದ ಸ್ವರೂಪದ್ದಾಗಿದೆಯೋ ಅಥವಾ ಭಾರತದ ಸಾರ್ವಜನಿಕ ನೀತಿಗೆ

ತದ್ವಿರುದ್ಧವಾದುದಾಗಿದೆಯೋ ಅಥವಾ ಮಾನವನ ಗೌರವ ಮತ್ತು ಘನತೆಗೆ ಸಂಬಂಧಿಸಿದ ನೀತಿ ನಿಯಮಗಳನ್ನು ಉಲ್ಲಂಘಿಸುವಂಥದಾಗಿದೆಯೋ ಆ ಕೆಲಸವನ್ನು ಒಳಗೊಂಡಿದೆ ಎಂಬ ಕಾರಣದ ಮೇಲೆ;

(ಡಿ) ಅರ್ಜಿದಾರನ ಪೂರ್ವೋತ್ತರಗಳನ್ನು ಅವನ ಆರ್ಥಿಕ ಸ್ಥಿತಿಗತಿಯನ್ನು ಅವನು ಒದಗಿಸುವ ಸೌಲಭ್ಯಗಳನ್ನು, ಈ ಹಿಂದೆ ಅವನಿಂದ ನಿಯೋಜಿತರಾದ ವ್ಯಕ್ತಿಗಳ ಕಾರ್ಯನಿರ್ವಹಣೆಯ ಮತ್ತು ಜೀವನ ನಿರ್ವಹಣೆಯ ಪರಿಸ್ಥಿತಿಗಳನ್ನು ಗಮನಿಸಿದಾಗ ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವ ವ್ಯಕ್ತಿಗಳು ಅವನಿಂದ ನೌಕರಿಗೆ ಭರ್ತಿಯಾಗುತ್ತಾರೋ ಅಂಥ ವ್ಯಕ್ತಿಗಳ ಹಿತದೃಷ್ಟಿಯಿಂದ ಅವನಿಗೆ ಪರ್ಮಿಟನ್ನು ನೀಡುವುದು ಸರಿಯಲ್ಲ ಎಂಬ ಕಾರಣದ ಮೇಲೆ;

(ಇ) ಅರ್ಜಿದಾರನು ನೌಕರಿಗೆ ಭರ್ತಿ ಮಾಡುವ ವ್ಯಕ್ತಿಗಳನ್ನು ಭಾರತದ ಹೊರಗಿನ ಯಾವ ರಾಷ್ಟ್ರದಲ್ಲಿ ಅಥವಾ ಸ್ಥಳದಲ್ಲಿ ನಿಯೋಜಿಸಲು ಉದ್ದೇಶಿಸಿದ್ದಾನೆಯೋ ಆ ರಾಷ್ಟ್ರದಲ್ಲಿನ ಸಂದರ್ಭ ಸನ್ನಿವೇಶಗಳನ್ನು ಗಮನಿಸಿದರೆ ಭಾರತದ ಯಾರೇ ನಾಗರಿಕನು ಅಂಥ ನಿಯೋಜನೆಗೆ ಸೇರಿಕೊಳ್ಳುವುದಕ್ಕಾಗಿ ವಲಸೆ ಹೋಗುವುದು ಅವನ ಹಿತದೃಷ್ಟಿಯಿಂದ ಸರಿಯಲ್ಲವೆಂಬ ಕಾರಣದ ಮೇಲೆ

– ತಿರಸ್ಕರಿಸಬಹುದು.

(4) ಸಕ್ಷಮ ಪ್ರಾಧಿಕಾರಿಯು ಅರ್ಜಿಯನ್ನು ತಿರಸ್ಕರಿಸಿ ಉಪಪ್ರಕರಣ (2)ರ ಮೇರೆಗೆ ಆದೇಶವನ್ನು ಹೊರಡಿಸಿದರೆ, ಅಂಥ ಆದೇಶವನ್ನು ಮಾಡುವುದಕ್ಕೆ ಅವನಿಗಿದ್ದ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಅರ್ಜಿದಾರನು ಕೋರಿದರೆ ಅದನ್ನು ಅವನಿಗೆ ಒದಗಿಸತಕ್ಕದ್ದು:

ಪರಂತು, ಸಕ್ಷಮ ಪ್ರಾಧಿಕಾರಿಯು ವಿದೇಶದೊಂದಿಗಿನ ಸ್ನೇಹಮಯ ಸಂಬಂಧಗಳ ಹಿತದೃಷ್ಟಿಯಿಂದ ಅಥವಾ ಜನಸಾಮಾನ್ಯನ ಹಿತದೃಷ್ಟಿಯಿಂದ ಅಂಥ ವಿವರಣೆಯ ಪ್ರತಿಯನ್ನು ಒದಗಿಸಲು ನಿರಾಕರಿಸುವುದು ಅಥವಾ ಸಂದರ್ಭಾನುಸಾರ ವಿವರಣೆಯಲ್ಲಿರುವ, ಸೂಕ್ತವೆಂದು ತಾನು ಭಾವಿಸುವ ಭಾಗಗಳ ಪ್ರತಿಯನ್ನು ಒದಗಿಸುವುದು ಅವಶ್ಯಕ ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ ಅವನು ಹಾಗೆ ಮಾಡಬಹುದು.

**18. ಪರ್ಮಿಟ್ಟಿನ ಕಾನೂನು ಮಾನ್ಯತೆಯ ಅವಧಿ.–** ಪ್ರಕರಣ 17ರ ಮೇರೆಗೆ ನೀಡಿದ ಪರ್ಮಿಟ್ಟು, ಅದನ್ನು ನೀಡಿದ ದಿನಾಂಕದಿಂದ, ಒಂದು ವರ್ಷದ ಅವಧಿಯನ್ನು ಮೀರದಂಥ ನಿಯಮಿಸಬಹುದಾದಂಥ ಅವಧಿಯು ಮುಗಿಯುವವರೆಗೆ ಅಥವಾ ಯಾವ ವ್ಯಕ್ತಿಗಳನ್ನು ನೌಕರಿಗೆ ಭರ್ತಿ ಮಾಡಿಕೊಳ್ಳುವುದಕ್ಕಾಗಿ ಅಂಥ ಪರ್ಮಿಟ್ಟನ್ನು ನೀಡಲಾಗಿದೆಯೋ ಅಂಥ ವ್ಯಕ್ತಿಗಳನ್ನು ನೌಕರಿಗೆ ಭರ್ತಿ ಮಾಡಿಕೊಳ್ಳುವ ಕಾರ್ಯ ಮುಕ್ತಾಯವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕಾನೂನುಮಾನ್ಯತೆ ಹೊಂದಿರತಕ್ಕದ್ದು:

ಪರಂತು, ಸಾಕಷ್ಟು ಕಾರಣಗಳಿಗಾಗಿ ನಿಯಮಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಹಾಗೆ ನೌಕರಿಗೆ ಭರ್ತಿ ಮಾಡಿಕೊಳ್ಳುವ ಕಾರ್ಯವನ್ನು ಪೂರ್ಣಗೊಳಿಸಲು ಪರ್ಮಿಟ್ಟುದಾರನಿಗೆ ಸಾಧ್ಯವಾಗದಿದ್ದರೆ, ನಿಯಮಿಸಿದ ಪ್ರಾಧಿಕಾರಿಯು, ಒಂದು ಸಲಕ್ಕೆ ಮೂರು ತಿಂಗಳಿಗೆ ಮೀರದಂಥ ಅವಧಿಗೆ ಅಥವಾ ಅವಧಿಗಳಿಗೆ ಆ ಪರ್ಮಿಟ್ಟಿನ ಕಾನೂನು ಮಾನ್ಯತೆಯನ್ನು ಈ ಸಂಬಂಧದಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು ವಿಸ್ತರಿಸಬಹುದು.

**19. ಕೆಲವು ಪರ್ಮಿಟ್ಟುಗಳ ನೋಂದಣಿ.–** ಪ್ರಕರಣ 15ರ ಉಪಪ್ರಕರಣ (2)ರ ಮೇರೆಗೆ ಅಧಿಕಾರ ಪಡೆದ ವ್ಯಕ್ತಿಯಿಂದ ಪಡೆದ ಯಾವುದೇ ಪರ್ಮಿಟ್ಟು, ಪ್ರಮಾಣೀಕರಿಸಿದ ಅದರ ಪ್ರತಿಯನ್ನು ನಿಯಮಿಸಿದ ರೀತಿಯಲ್ಲಿ ವಲಸಿಗರ ಮಹಾ ಸಂರಕ್ಷಣಾಧಿಕಾರಿಗೆ ಸಲ್ಲಿಸದ ಹೊರತು ಕಾನೂನು ಮಾನ್ಯತೆ ಹೊಂದಿರತಕ್ಕದ್ದಲ್ಲ.

**20. ಪರ್ಮಿಟ್ಟನ್ನು ರದ್ದುಪಡಿಸುವುದು ಅಥವಾ ಅಮಾನತ್ತಿನಲ್ಲಿಡುವುದು.–** ಪ್ರಮಾಣಪತ್ರವನ್ನು ರದ್ದುಪಡಿಸುವುದಕ್ಕೆ ಮತ್ತು ಅಮಾನತ್ತಿನಲ್ಲಿಡುವುದಕ್ಕೆ ಸಂಬಂಧಿಸಿದಂತೆ ಆ ಪ್ರಮಾಣಪತ್ರದಲ್ಲಿ ತಿಳಿಸಿರುವ ಪ್ರಕರಣ 14ರ ಉಪಬಂಧಗಳು ಅವಶ್ಯಕವಾಗಬಹುದಾದಂಥ ಮಾರ್ಪಾಡುಗಳಿಗೆ ಒಳಪಟ್ಟು (ಆ ಪ್ರಕರಣದಲ್ಲಿ ನೋಂದಣಿ ಪ್ರಾಧಿಕಾರಿಗೆ ಮಾಡಿರುವ ಉಲ್ಲೇಖಗಳನ್ನು ಈ ಅಧ್ಯಾಯದ ಮೇರೆಗೆ ಸಕ್ಷಮ ಪ್ರಾಧಿಕಾರಿಗೆ ಮಾಡಿದ ಉಲ್ಲೇಖಗಳೆಂಬುದಾಗಿ ಅರ್ಥೈಸುವುದಕ್ಕಾಗಿ ಮಾಡಿದ ಮಾರ್ಪಾಟುಗಳು ಸೇರಿದಂತೆ) ಪರ್ಮಿಟ್ಟನ್ನು ರದ್ದುಪಡಿಸುವುದಕ್ಕೆ ಅಥವಾ ಅಮಾನತ್ತಿನಲ್ಲಿಡುವುದಕ್ಕೆ ಅನ್ವಯವಾಗತಕ್ಕದ್ದು.

**21. ವಿನಾಯಿತಿ ನೀಡಲು ಅಧಿಕಾರ.–** ಈ ಅಧ್ಯಾಯದ ಮೇರೆಗೆ ಪರ್ಮಿಟ್ಟನ್ನು ಪಡೆದುಕೊಳ್ಳಬೇಕೆಂಬ ಅಗತ್ಯತೆಯಿಂದ ನಿಯೋಜಕರ ಯಾವುದೇ ವರ್ಗಕ್ಕೆ ಅಥವಾ ವರ್ಗಗಳಿಗೆ ವಿನಾಯಿತಿ ನೀಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಅಧಿಸೂಚನೆಯ ಮೂಲಕ ಮತ್ತು ಆ ಅಧಿಸೂಚನೆಯಲ್ಲಿ ಷರತ್ತುಗಳೇನಾದರೂ ನಿರ್ದಿಷ್ಟಪಡಿಸಬಹುದಾಗಿದ್ದರೆ ಅಂಥ ಷರತ್ತುಗಳಿಗೆ ಒಳಪಟ್ಟು, ಅಂಥ ವಿನಾಯಿತಿಯನ್ನು ನೀಡಬಹುದು.

## ಅಧ್ಯಾಯ V
## ವಲಸೆಗೆ ಅನುಮತಿ

**22. ವಲಸೆಗೆ ಅನುಮತಿಯ ಅಗತ್ಯತೆ, ಇತ್ಯಾದಿ.–** (1) ಭಾರತದ ಯಾರೇ ನಾಗರಿಕನು, ವಲಸೆ ಹೋಗುವುದಕ್ಕಾಗಿ ಈ ಅಧ್ಯಾಯದ ಮೇರೆಗೆ ವಲಸಿಗರ ಸಂರಕ್ಷಣಾಧಿಕಾರಿಯಿಂದ ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಅನುಮತಿ ಪತ್ರವನ್ನು (ಅಂಥ ಅನುಮತಿಯನ್ನು, ಇದರಲ್ಲಿ ಇನ್ನು ಮುಂದೆ ವಲಸೆಗೆ ಅನುಮತಿ ಎಂದು ಉಲ್ಲೇಖಿಸಲಾಗಿದೆ) ಪಡೆದುಕೊಂಡಿದ್ದ ಹೊರತು ವಲಸೆ ಹೋಗತಕ್ಕದ್ದಲ್ಲ.

(2) ವಲಸೆಗೆ ಅನುಮತಿಯನ್ನು ಪಡೆಯಲು ಸಲ್ಲಿಸುವ ಅರ್ಜಿಯು ನಿಯಮಿಸಿದ ನಮೂನೆಯಲ್ಲಿರತಕ್ಕದ್ದು ಮತ್ತು ನಿಯಮಿಸಿದ ವಿವರಗಳನ್ನು ಒಳಗೊಂಡಿರತಕ್ಕದ್ದು ಹಾಗೂ ಆ ಅರ್ಜಿಯನ್ನು ಸಂಬಂಧಪಟ್ಟ ವಲಸಿಗನು, ವಲಸಿಗರ ಸಂರಕ್ಷಣಾಧಿಕಾರಿಗೆ ಸಲ್ಲಿಸತಕ್ಕದ್ದು.

ಪರಂತು, ಅಂಥ ಅರ್ಜಿಯನ್ನು, ನೌಕರಿಗೆ ಭರ್ತಿ ಮಾಡಿಕೊಳ್ಳುವ ಯಾವ ಏಜೆಂಟನಿಂದ ವಲಸಿಗನು ನೌಕರಿಗೆ ಭರ್ತಿಯಾಗಿರುವನೋ ಆ ಯಾರಾದರೂ ಏಜೆಂಟನಿದ್ದರೆ ಅವನ ಮೂಲಕ ಅಥವಾ ಸಂಬಂಧಪಟ್ಟ ನಿಯೋಜಕನ ಮೂಲಕ ಸಲ್ಲಿಸಬಹುದು.

(3) ಉಪಪ್ರಕರಣ (2)ರ ಮೇರೆಗಿನ ಪ್ರತಿಯೊಂದು ಅರ್ಜಿಯ ಜೊತೆ,–

(ಎ) ಅರ್ಜಿದಾರನು ಯಾವ ನಿಯೋಜನೆಯನ್ನು ಕೈಗೊಳ್ಳುವುದಕ್ಕಾಗಿ ವಲಸೆ ಹೋಗಲು ಉದ್ದೇಶಿಸಿರುವನೋ ಆ ನಿಯೋಜನೆಗೆ ಸಂಬಂಧಪಟ್ಟ ಒಪ್ಪಂದದ (ನಿಯಮಿಸಿದ ರೀತಿಯಲ್ಲಿ ಸತ್ಯಾಪನೆ ಮಾಡಿರುವ

ಮತ್ತು ಅಧಿಪ್ರಮಾಣೀಕರಿಸಿರುವ) ಯಥಾ ಪ್ರತಿಯನ್ನು ಮತ್ತು ಅಂಥ ಒಪ್ಪಂದದಲ್ಲಿ ನಿಯಮಿಸಿದ ಎಲ್ಲಾ ಅಥವಾ ಯಾವುದೇ ವಿಷಯಗಳನ್ನು ನಿರ್ದಿಷ್ಟವಾಗಿ ನಿರೂಪಿಸಿರದಿದ್ದರೆ ಅಂಥ ಸಂದರ್ಭದಲ್ಲಿ ಅಂಥ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ವಿವರಗಳನ್ನು ನಿರೂಪಿಸಿರುವ (ನಿಯಮಿಸಿದ ರೀತಿಯಲ್ಲಿ ಸತ್ಯಾಪನೆ ಮಾಡಿರುವ ಮತ್ತು ಅಧಿಪ್ರಮಾಣೀಕರಿಸಿರುವ) ವಿವರಣಾ ಪತ್ರವನ್ನು ಸಹ ಇರಿಸಿರತಕ್ಕದ್ದು.

(ಬಿ) ಅರ್ಜಿದಾರನನ್ನು ಭಾರತಕ್ಕೆ ಹಿಮ್ಮರಳಿಸುವುದಕ್ಕೆ ವ್ಯವಸ್ಥೆ ಮಾಡುವುದು ಅವಶ್ಯಕವಾದಂಥ ಸಂದರ್ಭದಲ್ಲಿ ವಹಿಸಬಹುದಾದ ವೆಚ್ಚವನ್ನು ಭರಿಸಲು ಭದ್ರತೆಯನ್ನು ನೀಡಲು ಅವಕಾಶ ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ (ನಿಯಮಿಸಿದ ರೀತಿಯಲ್ಲಿ ಸತ್ಯಾಪನೆ ಮಾಡಿರುವ ಮತ್ತು ಅಧಿಪ್ರಮಾಣೀಕರಿಸಿರುವ) ವಿವರಣಾ ಪತ್ರವನ್ನು ಇರಿಸಿರತಕ್ಕದ್ದು.

(ಸಿ) ನಿಯಮಿಸಿದ ಫೀಜನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ರಸೀತಿಯನ್ನು ಇರಿಸಿರತಕ್ಕದ್ದು.

(ಡಿ) ನಿಯಮಿಸಬಹುದಾದಂಥ ಇತರ ಸುಸಂಬದ್ಧ ದಸ್ತಾವೇಜುಗಳನ್ನು ಅಥವಾ ಆ ಸುಸಂಬದ್ಧ ದಸ್ತಾವೇಜುಗಳ ಯಥಾ ಪ್ರತಿಗಳನ್ನು ಇರಿಸಿರತಕ್ಕದ್ದು.

(4) ವಲಸಿಗರ ಸಂರಕ್ಷಣಾಧಿಕಾರಿಯು, ಅರ್ಜಿಯಲ್ಲಿ ಮತ್ತು ಅರ್ಜಿಯೊಂದಿಗೆ ಸಲ್ಲಿಸಿದ ಇತರ ದಸ್ತಾವೇಜುಗಳಲ್ಲಿ ತಿಳಿಸಿರುವ ವಿವರಗಳ ಖಚಿತತೆ ಬಗ್ಗೆ ಸ್ವತಃ ಮನವರಿಕೆ ಮಾಡಿಕೊಂಡ ತರುವಾಯ ಅರ್ಜಿದಾರನ ವಲಸೆಗೆ ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಅಧಿಕಾರ ನೀಡತಕ್ಕದ್ದು ಅಥವಾ ಅರ್ಜಿಯಲ್ಲಿನ ನ್ಯೂನತೆಗಳ ಬಗ್ಗೆ ಸಂದರ್ಭಾನುಸಾರ ಅರ್ಜಿದಾರನಿಗೆ ಅಥವಾ ನೌಕರಿಗೆ ಭರ್ತಿ ಮಾಡಿಕೊಳ್ಳುವ ಯಾವ ಏಜೆಂಟನ ಅಥವಾ ಯಾವ ನಿಯೋಜಕನ ಮೂಲಕ ಅರ್ಜಿಗಳನ್ನು ಸಲ್ಲಿಸಲಾಗಿದೆಯೋ ಆ ಏಜೆಂಟನಿಗೆ ಅಥವಾ ನಿಯೋಜಕನಿಗೆ ಲಿಖಿತ ಆದೇಶದ ಮೂಲಕ ತಿಳಿಸತಕ್ಕದ್ದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸಮಯದೊಳಗೆ ಅಂಥ ನ್ಯೂನತೆಗಳನ್ನು ಸರಿಪಡಿಸುವಂತೆ ಅವನನ್ನು ಅಗತ್ಯಪಡಿಸತಕ್ಕದ್ದು ಅಥವಾ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

(5) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ವಲಸಿಗರ ಸಂರಕ್ಷಣಾಧಿಕಾರಿಯು, ವಲಸೆಗೆ ಅನುಮತಿಗಾಗಿ ಸಲ್ಲಿಸಿದ ಅರ್ಜಿಯನ್ನು ಈ ಮುಂದಿನ ಕಾರಣಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಎಂದರೆ:–

(ಎ) ಅರ್ಜಿದಾರನು ಕೈಗೊಳ್ಳಲು ಉದ್ದೇಶಿಸಿರುವ ನಿಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳು ತಾರತಮ್ಯದಿಂದ ಕೂಡಿವೆ ಅಥವಾ ಶೋಷಣೆಗೆ ಗುರಿಪಡಿಸುವಂಥವುಗಳು ಆಗಿವೆ ಎಂಬ;

(ಬಿ) ಅರ್ಜಿದಾರನು ಕೈಗೊಳ್ಳಲು ಉದ್ದೇಶಿಸಿರುವ ನಿಯೋಜನೆಯು, ಯಾವ ಕೆಲಸವು ಭಾರತದ ಕಾನೂನುಗಳಿಗನುಸಾರವಾಗಿ ಕಾನೂನು ಬಾಹಿರವಾದ ಸ್ವರೂಪದ್ದಾಗಿದೆಯೋ ಅಥವಾ ಭಾರತದ ಸಾರ್ವಜನಿಕ ನೀತಿಗೆ ತದ್ವಿರುದ್ಧವಾದುದಾಗಿದೆಯೋ ಅಥವಾ ಮಾನವನ ಗೌರವ ಮತ್ತು ಘನತೆಗೆ ಸಂಬಂಧಿಸಿದ ನೀತಿನಿಯಮಗಳನ್ನು ಉಲ್ಲಂಘಿಸುವಂಥದ್ದಾಗಿದೆಯೋ ಆ ಕೆಲಸವನ್ನು ಒಳಗೊಂಡಿದೆ ಎಂಬ;

(ಸಿ) ಅರ್ಜಿದಾರನು ಕಳಪೆ ಗುಣಮಟ್ಟದ ಕಾರ್ಯನಿರ್ವಹಣಾ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಾಗಿದೆ ಅಥವಾ ಕಳಪೆ ಗುಣಮಟ್ಟದ ಜೀವನ ಪರಿಸ್ಥಿತಿಗಳಲ್ಲಿ ಜೀವಿಸಬೇಕಾಗಿದೆ ಎಂಬ;

(ಡಿ) ಅರ್ಜಿದಾರನು ಯಾವ ದೇಶದಲ್ಲಿ ಅಥವಾ ಸ್ಥಳದಲ್ಲಿ ನಿಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿರುವನೋ ಆ ದೇಶದಲ್ಲಿನ ಅಥವಾ ಸ್ಥಳದಲ್ಲಿನ ಪರಿಸ್ಥಿತಿಗಳನ್ನು ಅಥವಾ ಅರ್ಜಿದಾರನು ಯಾವ ನಿಯೋಜಕನ ಅಧೀನದಲ್ಲಿ ನಿಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿರುವನೋ ಆ ನಿಯೋಜಕನ ಪೂರ್ವೋತ್ತರಗಳನ್ನು ಅಥವಾ ಯಾವುದೇ ಇತರ ಸಂಬಂಧಪಟ್ಟ ಪರಿಸ್ಥಿತಿಗಳನ್ನು ಗಮನಿಸಿದಾಗ ಅರ್ಜಿದಾರನು ವಲಸೆ ಹೋಗುವುದು ಅವನ ಹಿತದೃಷ್ಟಿಯಿಂದಲೇ ಸರಿಯಲ್ಲ ಎಂಬ;

(ಇ) ಅರ್ಜಿದಾರನನ್ನು ಭಾರತಕ್ಕೆ ಹಿಮ್ಮರಳಿಸಲು ವ್ಯವಸ್ಥೆ ಮಾಡುವುದು ಅವಶ್ಯಕವಾದಂಥ ಸಂದರ್ಭದಲ್ಲಿ ಮಾಡಬಹುದಾದಂಥ ವೆಚ್ಚವನ್ನು ಭರಿಸಲು ಯಾವುದೇ ಅವಕಾಶ ಕಲ್ಪಿಸಿಲ್ಲ ಅಥವಾ ಯಾವುದೇ ಏರ್ಪಾಡು ಮಾಡಿಲ್ಲ ಎಂಬ ಅಥವಾ ಈ ಬಗ್ಗೆ ಮಾಡಿರುವ ವ್ಯವಸ್ಥೆಗಳು ಅಥವಾ ಏರ್ಪಾಡುಗಳು ಈ ಉದ್ದೇಶಕ್ಕೆ ಸಮರ್ಪಕವಾದವುಗಳು ಅಗಿಲ್ಲ ಎಂಬ;

– ಕಾರಣದ ಅಥವಾ ಕಾರಣಗಳ ಮೇಲೆ ತಿರಸ್ಕರಿಸಬಹುದೇ ಹೊರತು, ಯಾವುದೇ ಇತರ ಕಾರಣದ ಮೇಲೆ ಅಲ್ಲ.

(6) ವಲಸೆಗೆ ಅನುಮತಿಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ಪ್ರತಿಯೊಂದು ಆದೇಶದಲ್ಲಿ ಆ ಆದೇಶವನ್ನು ಯಾವ ಕಾರಣದ ಅಥವಾ ಕಾರಣಗಳ ಮೇಲೆ ಮಾಡದಾಗಿದೆಯೋ ಆ ಕಾರಣವನ್ನು ಅಥವಾ ಆ ಕಾರಣಗಳನ್ನು ಮತ್ತು ಆ ಕಾರಣವು ಅಥವಾ ಕಾರಣಗಳು ಯಾವ ವಾಸ್ತವಾಂಶಗಳನ್ನು ಅಥವಾ ಸಂದರ್ಭ ಸನ್ನಿವೇಶಗಳನ್ನು ಆಧರಿಸಿದೆಯೋ ಅಥವಾ ಆಧರಿಸಿವೆಯೋ ಆ ವಾಸ್ತವಾಂಶಗಳನ್ನು ಅಥವಾ ಸಂದರ್ಭ ಸನ್ನಿವೇಶಗಳನ್ನು ಸ್ಪಷ್ಟವಾಗಿ ನಿರೂಪಿಸಿರತಕ್ಕದ್ದು.

## ಅಧ್ಯಾಯ VI

## ಅಪೀಲುಗಳು

**23. ಅಪೀಲುಗಳು.–** (1) ಯಾರೇ ವ್ಯಕ್ತಿಯು,–

(ಎ) ನೋಂದಣಿಗಾಗಿ ಅವನು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಅಥವಾ ಯಾವುದೇ ಭದ್ರತೆಯನ್ನು ಒದಗಿಸುವಂತೆ ಅಥವಾ ಅವನಿಗೆ ನೀಡಿರುವ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿರುವ (ನಿಯಮಿಸಿದ ನಿಬಂಧನೆ ಅಥವಾ ಷರತ್ತಾಗಿರದ) ಯಾವುದೇ ಷರತ್ತನ್ನು ಅಥವಾ ನಿಬಂಧನೆಯನ್ನು ಪಾಲಿಸುವಂತೆ ಅವನನ್ನು ಅಗತ್ಯಪಡಿಸಿ ಅಥವಾ ಅವನಿಗೆ ನೀಡಿರುವ ಪ್ರಮಾಣಪತ್ರವನ್ನು ಅಮಾನತ್ತಿನಲ್ಲಿಟ್ಟು ಅಥವಾ ರದ್ದುಪಡಿಸಿ ಅಥವಾ ನವೀಕರಿಸಲು ನಿರಾಕರಿಸಿ ನೊಂದಣಿ ಪ್ರಾಧಿಕಾರಿಯು ಮಾಡಿದ ಆದೇಶದಿಂದ ಬಾಧಿತನಾದರೆ; ಅಥವಾ

(ಬಿ) ಪರ್ಮಿಟ್ಟಿಗಾಗಿ ಅವನು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಅಥವಾ ಅವನಿಗೆ ನೀಡಿರುವ ಪರ್ಮಿಟ್‌ನಲ್ಲಿ ನಿರ್ದಿಷ್ಟಪಡಿಸಿರುವ (ನಿಯಮಿಸಿದ ನಿಬಂಧನೆ ಅಥವಾ ಷರತ್ತು ಆಗಿರದ) ಯಾವುದೇ ನಿಬಂಧನೆಗಳನ್ನು ಅಥವಾ ಷರತ್ತುಗಳನ್ನು ಪಾಲಿಸುವಂತೆ ಅವನನ್ನು ಅಗತ್ಯಪಡಿಸಿ ಅಥವಾ ಅವನಿಗೆ ನೀಡಿರುವ ಪರ್ಮಿಟನ್ನು ಅಮಾನತ್ತಿನಲ್ಲಿಟ್ಟು ಅಥವಾ ರದ್ದುಪಡಿಸಿ ಅಥವಾ ಅದರ ಕಾನೂನುಮಾನ್ಯ ಅವಧಿಯನ್ನು ವಿಸ್ತರಿಸಲು ನಿರಾಕರಿಸಿ ಸಕ್ಷಮ ಪ್ರಾಧಿಕಾರಿಯು ಮಾಡಿರುವ ಆದೇಶದಿಂದ ಬಾಧಿತನಾದರೆ; ಅಥವಾ

(ಸಿ) ವಲಸೆಗೆ ಅನುಮತಿಗಾಗಿ ಅವನು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ವಲಸಿಗರ ಸಂರಕ್ಷಣಾಧಿಕಾರಿಯು ಮಾಡಿದ ಆದೇಶದಿಂದ ಬಾಧಿತನಾದರೆ; ಅಥವಾ

(ಡಿ) ಈ ಅಧಿನಿಯಮದ ಮೇರೆಗೆ ಯಾವುದೇ ಭದ್ರತೆಯನ್ನು, ಹೆಚ್ಚಿನ ಭದ್ರತೆಯನ್ನು ಅಥವಾ ಹೊಸ ಭದ್ರತೆಯನ್ನು ಒದಗಿಸುವಂತೆ ಅವನನ್ನು ಅಗತ್ಯಪಡಿಸಿ ಅಥವಾ ಅವನು ಒದಗಿಸಿದ ಭದ್ರತೆಯ ಹೆಚ್ಚಿನ ಭದ್ರತೆಯ ಅಥವಾ ಹೊಸ ಭದ್ರತೆಯ ಹಣವನ್ನು (ಎರಡೂ ಸಂದರ್ಭಗಳಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ) ಮುಟ್ಟುಗೋಲು ಹಾಕಿಕೊಂಡು ಅಥವಾ ಭದ್ರತೆಯ ಹಣವನ್ನು ಹಿಂದಿರುಗಿಸುವುದಕ್ಕೆ ಅವನು ಮಾಡಿದ ಕ್ಲೇಮನ್ನು ತಿರಸ್ಕರಿಸಿ ನೋಂದಣಿ ಪ್ರಾಧಿಕಾರಿಯು ಅಥವಾ ಸಕ್ಷಮ ಪ್ರಾಧಿಕಾರಿಯು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯು ನಿಯಮಿಸಿದ ಪ್ರಾಧಿಕಾರಿಯು ಮಾಡಿದ ಆದೇಶದಿಂದ ಬಾಧಿತನಾದರೆ

– ಆಗ ಅವನು ಅಂಥ ಆದೇಶದ ವಿರುದ್ಧ ನಿಯಮಿಸಬಹುದಾದಂಥ ಅವಧಿಯೊಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಪೀಲು ಸಲ್ಲಿಸಲು ನಿಯಮಿಸಿದ ಅವಧಿಯು ಮುಕ್ತಾಯವಾದ ತರುವಾಯ ಸಲ್ಲಿಸಿದ ಯಾವುದೇ ಅಪೀಲನ್ನು ಪುರಸ್ಕರಿಸತಕ್ಕದ್ದಲ್ಲ:

ಪರಂತು, ಆ ಅವಧಿಯೊಳಗೆ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ತನಗೆ ಸಾಧ್ಯವಾಗಿಲ್ಲವೆಂದು ಅಪೀಲುದಾರನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರೆ, ಅಪೀಲನ್ನು ಸಲ್ಲಿಸಲು ನಿಯಮಿಸಿದ ಅವಧಿಯು ಮುಕ್ತಾಯವಾದ ನಂತರವೂ ಅಪೀಲನ್ನು ಪುರಸ್ಕರಿಸಬಹುದು.

(3) ಅಪೀಲು ಸಲ್ಲಿಸಲು ನಿಯಮಿಸಿರುವ ಅವಧಿಯನ್ನು ಕಾಲಪರಿಮಿತಿ ಅಧಿನಿಯಮ, 1963 (1963ರ 36)ರ ಉಪಬಂಧಗಳಿಗನುಸಾರವಾಗಿ, ಅದರಲ್ಲಿ ಹೇಳಿರುವ ಅವಧಿಗಳ ಲೆಕ್ಕಾಚಾರವನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲನ್ನು ನಿಯಮಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದರ ಜೊತೆಗೆ ಯಾವ ಆದೇಶದ ವಿರುದ್ಧ ಆ ಅಪೀಲನ್ನು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ಪ್ರತಿಯನ್ನು ಮತ್ತು ನಿಯಮಿಸಬಹುದಾದಂಥ ಫೀಜನ್ನು ಇರಿಸತಕ್ಕದ್ದು.

(5) ಅಪೀಲನ್ನು ವಿಲೆ ಮಾಡುವ ವಿಧಾನವು (ಯಾವ ಪ್ರಾಧಿಕಾರಿಯ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಪ್ರಾಧಿಕಾರಿಗೆ, ಪುನರ್ ಪರಿಶೀಲನೆಗಾಗಿ ವಿಷಯವನ್ನು ಕಳುಹಿಸಿಕೊಡುವುದು ಸೇರಿದಂತೆ) ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಪೀಲನ್ನು ವಿಲೆ ಮಾಡುವುದಕ್ಕೂ ಮೊದಲು, ತನ್ನ ವಾದವನ್ನು ಮಂಡಿಸುವುದಕ್ಕೆ ಅಪೀಲುದಾರನಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(6) ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಡಿಸಿ ಅಥವಾ ವ್ಯತಿರಿಕ್ತಗೊಳಿಸಿ ಈ ಪ್ರಕರಣದ ಮೇರೆಗಿನ ಅಪೀಲಿನಲ್ಲಿ ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾದುದಾಗಿರತಕ್ಕದ್ದು.

## ಅಧ್ಯಾಯ VII

## ಅಪರಾಧಗಳು ಮತ್ತು ದಂಡನೆಗಳು

**24. ಅಪರಾಧಗಳು ಮತ್ತು ದಂಡನೆಗಳು.–** (1) ಯಾರೇ ವ್ಯಕ್ತಿಯು,–

(ಎ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಹೊರತು, ವಲಸೆ ಹೋದರೆ; ಅಥವಾ

(ಬಿ) ಪ್ರಕರಣ 10ರ ಅಥವಾ ಪ್ರಕರಣ 16ರ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ಸಿ) ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿಯನ್ನು ಒದಗಿಸಿ ಅಥವಾ ಯಾವುದೇ ಮುಖ್ಯ ಮಾಹಿತಿಯನ್ನು ಮುಚ್ಚಿಟ್ಟು ಈ ಅಧಿನಿಯಮದ ಮೇರೆಗೆ ಪ್ರಮಾಣಪತ್ರವನ್ನು ಅಥವಾ ಪರ್ಮಿಟ್ಟನ್ನು ಅಥವಾ ವಲಸೆಗೆ ಅನುಮತಿಯನ್ನು ಪಡೆದರೆ; ಅಥವಾ

(ಡಿ) ವಲಸೆಗೆ ಅನುಮತಿಯ ರೂಪದಲ್ಲಿ, ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಪ್ರಮಾಣಪತ್ರದಲ್ಲಿ ಅಥವಾ ಪರ್ಮಿಟ್ಟಿನಲ್ಲಿ ಅಥವಾ ಯಾವುದೇ ದಸ್ತಾವೇಜಿನಲ್ಲಿ ಅಥವಾ ಹಿಂಬರಹದಲ್ಲಿ ಕಾನೂನುಬದ್ಧ ಅಧಿಕಾರವಿಲ್ಲದೆ ಯಾವುದೇ ಬದಲಾವಣೆಯನ್ನು ಮಾಡಿದರೆ ಅಥವಾ ಮಾಡಿಸಿದರೆ; ಅಥವಾ

(ಇ) ಈ ಅಧಿನಿಯಮದ ಮೇರೆಗೆ ವಲಸಿಗರ ಸಂರಕ್ಷಣಾಧಿಕಾರಿಯು ಮಾಡಿದ ಯಾವುದೇ ಆದೇಶಕ್ಕೆ ಅವಿಧೇಯತೆ ತೋರಿಸಿದರೆ ಅಥವಾ ಅದನ್ನು ಪಾಲಿಸಲು ನಿರಾಕರಿಸಿದರೆ; ಅಥವಾ

(ಎಫ್) ಈ ಅಧಿನಿಯಮದಲ್ಲಿ ನಿಯಮಿಸಿರುವ ಪರಿಮಿತಿಗಳಿಗಿಂತ ಹೆಚ್ಚಾಗಿ ಯಾವುದೇ ಶುಲ್ಕಗಳನ್ನು ವಲಸಿಗರಿಂದ ವಸೂಲ್ಮಾಡಿದರೆ; ಅಥವಾ

(ಜಿ) ಯಾರೇ ವಲಸಿಗರನ್ನು ವಂಚಿಸಿದರೆ

– ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ನ್ಯಾಯಾಲಯದ ತೀರ್ಪಿನಲ್ಲಿ ತದ್ವಿರುದ್ಧವಾಗಿ ಯಾವುದೇ ವಿಶೇಷ ಮತ್ತು ಸಮರ್ಪಕ ಕಾರಣಗಳನ್ನು ತಿಳಿಸಿರದಿದ್ದರೂ, ಅಂಥ ಕಾರಾವಾಸ ಶಿಕ್ಷೆಯು ಆರು ತಿಂಗಳುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗಿನ ಯಾವುದೇ ಅಪರಾಧವನ್ನು ಮಾಡಲು ಪ್ರಯತ್ನಿಸಿದರೆ ಅವನನ್ನು ಆ ಅಪರಾಧಕ್ಕಾಗಿ ಆ ಉಪಪ್ರಕರಣದಲ್ಲಿ ಹೇಳಿರುವಂಥ ದಂಡನೆಯ ಶಿಕ್ಷೆಗೆ ಗುರಿಪಡಿಸತಕ್ಕದ್ದು.

(3) ವಲಸೆ ಹೋಗುವುದಕ್ಕಾಗಿ ಈ ಅಧಿನಿಯಮದ ಮೇರೆಗೆ ವಲಸೆಗೆ ಅನುಮತಿಯನ್ನು ಯಾವ ನಿಬಂಧನೆಗೆ ಮತ್ತು ಷರತ್ತಿಗೆ ಒಳಪಟ್ಟು ನೀಡಲಾಗಿದೆಯೋ ಆ ನಿಬಂಧನೆಯನ್ನು ಅಥವಾ ಷರತ್ತನ್ನು ಯಾರಾದರೂ ಉಲ್ಲಂಘಿಸಿದರೆ ಅಂಥ ಉಲ್ಲಂಘನೆಗೆ ಈ ಅಧಿನಿಯಮದಲ್ಲಿ ಎಲ್ಲಿಯೂ ಇತರ ಯಾವುದೇ ಶಿಕ್ಷೆಯನ್ನು ಉಪಬಂಧಿಸಿರದಿದ್ದರೆ, ಅವನನ್ನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಪಡಿಸತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧವೆಸಗಲು ಯಾರಾದರೂ ದುಷ್ಪ್ರೇರಣೆ ಮಾಡಿದರೆ, ದುಷ್ಪ್ರೇರಿತ ಕೃತ್ಯವನ್ನು ದುಷ್ಪ್ರೇರಣೆ ಪರಿಣಾಮವಾಗಿ ಎಸಗಿದ್ದರೆ ಅವನು ಆ ಅಪರಾಧಕ್ಕಾಗಿ ಉಪಬಂಧಿಸಿರುವ ದಂಡನೆಯ ಶಿಕ್ಷೆಗೆ ಗುರಿಯಾಗತಕ್ಕದ್ದು.

(5) ಯಾರಾದರೂ, ಈ ಅಧಿನಿಯಮದ ಯಾವುದೇ ಉಪಬಂಧದದ ಮೇರೆಗಿನ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾಗಿದ್ದು, ಅವನು ಅದೇ ಉಪಬಂಧದ ಮೇರೆಗಿನ ಅಪರಾಧಕ್ಕಾಗಿ ಮತ್ತೆ ಅಪರಾಧ ನಿರ್ಣೀತನಾದರೆ, ಎರಡನೆ ಭಾರಿ ಮಾಡಿದ ಅಪರಾಧಕ್ಕಾಗಿ ಹಾಗೂ ಆ ತರುವಾಯ ಮಾಡಿದ ಪ್ರತಿಯೊಂದು ಅಪರಾಧಕ್ಕಾಗಿ ಆ ಅಪರಾಧಕ್ಕೆ ಉಪಬಂಧಿಸಿರುವ ದಂಡನೆಯ ಎರಡು ಪಟ್ಟು ದಂಡನೆಯ ಶಿಕ್ಷೆಗೆ ಗುರಿಯಾಗತಕ್ಕದ್ದು.

**25. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು, ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಕಂಪನಿಯು ಹಾಗೂ ಆ ವ್ಯಕ್ತಿಯು ತದನುಸಾರವಾಗಿ ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ಶಿಕ್ಷೆಗೆ ಗುರಿಯಾಗತಕ್ಕದ್ದು;

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತ್ತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಎಚ್ಚರಿಕೆ ವಹಿಸಿದ್ದೇನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿರುವ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದರೆ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತ್ತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತ್ತೆಂದು ಆರೋಪಿಸಿರುವುದು ರುಜುವಾತಾದರೆ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅವರು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ, "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

**26. ಅಪರಾಧಗಳು ಸಂಜ್ಞೇಯವಾಗಿರುವುದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಮೆರೆಗಿನ ಎಲ್ಲ ಅಪರಾಧಗಳು ಸಂಜ್ಞೇಯವಾದವುಗಳಾಗಿರತಕ್ಕದ್ದು.

**27. ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿ ಅವಶ್ಯಕ.–** ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಯ ವಿರುದ್ಧ, ಕೇಂದ್ರ ಸರ್ಕಾರದಿಂದ ಅಥವಾ ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಲಿಖಿತ ಆದೇಶದ ಮೂಲಕ ಅಧಿಕೃತಗೊಂಡ ಅಧಿಕಾರಿಯಿಂದ ಅಥವಾ ಪ್ರಾಧಿಕಾರಿಯಿಂದ ಪೂರ್ವ ಮಂಜೂರಾತಿ ಪಡೆಯದೆ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ:

ಪರಂತು, ವಲಸಿಗನಿಗೆ ಸಂಬಂಧಪಟ್ಟಂತೆ ಅಥವಾ ವಲಸೆ ಹೋಗಲು ಇಚ್ಛಿಸಿರುವ ವಲಸಿಗನಿಗೆ ಸಂಬಂಧಪಟ್ಟಂತೆ ಅಪರಾಧವನ್ನು ಮಾಡಿದ್ದಾಗ ಮತ್ತು ಅಂಥ ವಲಸಿಗನು ಅಥವಾ ವಲಸೆ ಹೋಗಲು ಇಚ್ಛಿಸಿರುವ ವಲಸಿಗನು ಅಥವಾ ಅಂಥ ವಲಸಿಗನ ಪರವಾಗಿ ಅಥವಾ ವಲಸೆ ಹೋಗಲು ಇಚ್ಛಿಸಿರುವ ವಲಸಿಗನ ಪರವಾಗಿ, ಆ ವಲಸಿಗನ ಅಥವಾ ವಲಸೆ ಹೋಗಲು ಇಚ್ಛಿಸಿರುವ ವಲಸಿಗನ ತಂದೆ, ತಾಯಿ, ಪತಿ, ಪತ್ನಿ, ಮಗ, ಮಗಳು, ಸೋದರ, ಸೋದರಿ ಅಥವಾ ಪಾಲಕ ಅಥವಾ ಅಂಥ ವಲಸಿಗನು ಅಥವಾ ವಲಸೆ ಹೋಗಲು ಇಚ್ಛಿಸಿರುವ ವಲಸಿಗನು, ಹಿಂದೂ ಅವಿಭಕ್ತ ಕುಟುಂಬದವನಾಗಿದ್ದರೆ ಆ ಕುಟುಂಬದ ಯಜಮಾನನು ದೂರನ್ನು ಸಲ್ಲಿಸಿದ್ದರೆ ಯಾವುದೇ ಮಂಜೂರಾತಿಯನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲ.

**28. ಶಿಕ್ಷೆಯು ಯಾವುದೇ ಇತರ ಕ್ರಮಕ್ಕೆ ಬಾಧಕ ಉಂಟು ಮಾಡದಿರುವುದು.–** ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಶಿಕ್ಷೆಯನ್ನು ವಿಧಿಸಿರುವುದು, ಅಂಥ ಉಲ್ಲಂಘನೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಬಾಧಕವುಂಟು ಮಾಡತಕ್ಕದ್ದಲ್ಲ.

## ಅಧ್ಯಾಯ VIII

### ಸಂಕೀರ್ಣ

**29. ವ್ಯಕ್ತಿಯು ವಲಸಿಗನೇ ಎಂಬ ಪ್ರಶ್ನೆಯ ನಿರ್ಧರಣೆ.–** ಭಾರತವನ್ನು ಬಿಟ್ಟು ಹೋಗಲು ಇಚ್ಛಿಸಿರುವ ವ್ಯಕ್ತಿಯು ವಲಸಿಗನೇ ಅಥವಾ ವಲಸಿಗನಲ್ಲವೇ ಎಂಬ ಬಗ್ಗೆ ವಲಸಿಗರ ಸಂರಕ್ಷಣಾಧಿಕಾರಿಯ ಮುಂದೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅವನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆ ನಡೆಸಿದ ತರುವಾಯ ಮತ್ತು ನೇಮಿಸಬಹುದಾದಂಥ ಸಾಕ್ಷ್ಯವನ್ನು ಮತ್ತು ಸುಸಂಗತವಾಗಬಹುದಾದಂಥ ಇತರ ಸಾಕ್ಷ್ಯವನ್ನು ಪರ್ಯಾಲೋಚಿಸಿದ ನಂತರ ಆ ಪ್ರಶ್ನೆಯನ್ನು ವಲಸಿಗರ ಸಂರಕ್ಷಣಾಧಿಕಾರಿಯು ತೀರ್ಮಾನಿಸತಕ್ಕದ್ದು ಮತ್ತು ತನ್ನ ತೀರ್ಮಾನವನ್ನು ನಿಯಮಿಸಿದ ರೀತಿಯಲ್ಲಿ ಅಂಥ ವ್ಯಕ್ತಿಗೆ ತಿಳಿಸತಕ್ಕದ್ದು.

**30. ಯಾವುದೇ ದೇಶಕ್ಕೆ ವಲಸೆ ಹೋಗುವುದನ್ನು ಜನಸಾಮಾನ್ಯರ ಹಿತದೃಷ್ಟಿ ಇತ್ಯಾದಿಯ ಕಾರಣದಿಂದ ನಿಷೇಧಿಸಲು ಅಧಿಕಾರ.–** (1) ಭಾರತದ ಸಾರ್ವಭೌಮತ್ವವನ್ನು ಮತ್ತು ಏಕತೆಯನ್ನು, ಭಾರತದ ಭದ್ರತೆಯನ್ನು, ಯಾವುದೇ ವಿದೇಶದೊಂದಿಗೆ ಭಾರತವು ಹೊಂದಿರುವ ಸ್ನೇಹಸಂಬಂಧವನ್ನು ಅಥವಾ ಜನಸಾಮಾನ್ಯರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಯಾವುದೇ ದೇಶಕ್ಕೆ ವಲಸೆ ಹೋಗವುದನ್ನು ನಿಷೇಧಿಸಲು ಸಾಕಷ್ಟು ಕಾರಣಗಳಿವೆಯೆಂದು ಕೇಂದ್ರ ಸರ್ಕಾರವು ನಂಬಲು ಕಾರಣವಿದ್ದರೆ, ಆ ದೇಶಕ್ಕೆ ವಲಸೆ ಹೋಗುವುದನ್ನು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿಷೇಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದಂಥ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು:

ಪರಂತು, ಉಪಪ್ರಕರಣ (1)ರಲ್ಲಿ ತಿಳಿಸಿದ ಕಾರಣಗಳು ಇನ್ನು ಇವೆ ಎಂದು ಕೇಂದ್ರ ಸರ್ಕಾರವು ನಂಬಲು ಕಾರಣವಿದ್ದರೆ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಯೊಂದು ಸಲಕ್ಕೆ ಆರು ತಿಂಗಳುಗಳಿಗೆ ಮೀರದಂಥ ಹೆಚ್ಚಿನ ಅವಧಿಯವರೆಗೆ ಆ ದೇಶಕ್ಕೆ ವಲಸೆ ಹೋಗುವುದನ್ನು ನಿಷೇಧಿಸಬಹುದು.

**31. ಒಂದು ದೇಶದಲ್ಲಿ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಿರುವುದು ಹಾಗೂ ನಾಗರಿಕ ಗಲಭೆ ಮುಂತಾದ ಕಾರಣಗಳಿಂದ ಆ ದೇಶಕ್ಕೆ ವಲಸೆ ಹೋಗುವುದನ್ನು ನಿಷೇಧಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು,–

(ಎ) ಯಾವುದೇ ದೇಶಕ್ಕೆ ವಲಸೆ ಹೋಗಲು ಇಚ್ಛಿಸಿರುವ ವಲಸಿಗರಿಗೆ ಆ ದೇಶಕ್ಕೆ ವಲಸೆ ಹೋಗಲು ಅನುಮತಿಸಿದರೆ;

(i) ಆ ದೇಶದಲ್ಲಿ ಯಾವುದೇ ರೋಗ ಕಾಣಿಸಿಕೊಂಡಿರುವ ಅಥವಾ ಪರಿಸರದಲ್ಲಿ ತೀವ್ರತರ ಮಾಲಿನ್ಯ ಉಂಟಾಗಿರುವ ಕಾರಣದಿಂದಾಗಿ; ಅಥವಾ

(ii) ಆ ದೇಶದಲ್ಲಿ ಕ್ಷೋಭೆಗಳು ಅಥವಾ ನಾಗರಿಕ ಗಲಭೆ ಅಥವಾ ನಾಗರಿಕ ದೊಂಬಿ ಅಥವಾ ರಾಜಕೀಯ ಬಿಕ್ಕಟ್ಟು ಕಾಣಿಸಿಕೊಂಡಿರುವ ಕಾರಣದಿಂದಾಗಿ

– ಅವನು ಆ ದೇಶವನ್ನು ತಲುಪಿದ ಮೇಲೆ ಅವನ ಜೀವ ಗಂಡಾಂತರಕ್ಕೆ ಸಿಲುಕುತ್ತದೆ ಎಂದು ನಂಬಲು;

(ಬಿ) ಭಾರತವು ಆ ದೇಶದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿಲ್ಲದಿರುವ ಕಾರಣಗಳಿಂದಾಗಿ ವಲಸಿಗರನ್ನು ತಾರತಮ್ಯದಿಂದ ನೋಡದಂತೆ, ಕೆಟ್ಟದಾಗಿ ನಡೆಸಿಕೊಳ್ಳದಂತೆ ಮತ್ತು ಶೋಷಣೆ ಮಾಡದಂತೆ ಅವರನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲವೆಂದು ನಂಬಲು

– ಕಾರಣವಿದ್ದರೆ ಕೇಂದ್ರ ಸರ್ಕಾರವು ಆ ದೇಶಕ್ಕೆ ವಲಸೆ ಹೋಗುವುದನ್ನು ಅಧಿಸೂಚನೆಯ ಮೂಲಕ ನಿಷೇಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳುಗಳಿಗೆ ಮೀರದಂಥ ಅವಧಿಯವರೆಗೆ ಪರಿಣಾಮಕಾರಿಯಾಗಿರತಕ್ಕದ್ದು:

ಪರಂತು, ಉಪಪ್ರಕರಣ (1)ರಲ್ಲಿ ತಿಳಿಸಿದ ಕಾರಣಗಳು ಇನ್ನು ಮುಂದುವರಿದಿವೆ ಎಂದು ಕೇಂದ್ರ ಸರ್ಕಾರವು ನಂಬಲು ಕಾರಣಗಳಿದ್ದರೆ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಯೊಂದು ಸಲಕ್ಕೆ ಆರು ತಿಂಗಳುಗಳಿಗೆ ಮೀರದಂಥ ಹೆಚ್ಚಿನ ಅವಧಿಯವರೆಗೆ ಆ ದೇಶಕ್ಕೆ ವಲಸೆ ಹೋಗುವುದನ್ನು ನಿಷೇಧಿಸಬಹುದು.

**32. ಯಾವುದೇ ವರ್ಗದ ಅಥವಾ ಪ್ರವರ್ಗದ ವ್ಯಕ್ತಿಗಳು ವಲಸೆ ಹೋಗುವುದನ್ನು ನಿಷೇಧಿಸಲು ಅಧಿಕಾರ.–** (1) ಜನಸಾಮಾನ್ಯರ ಹಿತದೃಷ್ಟಿಯಿಂದ, ಯಾವುದೇ ವರ್ಗದ ಅಥವಾ ಪ್ರವರ್ಗದ ವ್ಯಕ್ತಿಗಳ ವಯಸ್ಸನ್ನು, ಆ ವ್ಯಕ್ತಿಯು ಗಂಡೇ ಅಥವಾ ಹೆಣ್ಣೇ ಎಂಬುದನ್ನು ಅಥವಾ ಇತರ ಸುಸಂಗತ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಆ ವ್ಯಕ್ತಿಗಳು ಯಾವುದೇ ದೇಶಕ್ಕೆ ವಲಸೆ ಹೋಗುವುದನ್ನು ನಿಷೇಧಿಸಬೇಕು ಎಂದು ಕೇಂದ್ರ ಸರ್ಕಾರವು ಪರ್ಯಾಲೋಚಿಸಿದರೆ, ಅದು ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವರ್ಗದ ಅಥವಾ ಪ್ರವರ್ಗದ ವ್ಯಕ್ತಿಗಳು ಆ ದೇಶಕ್ಕೆ ವಲಸೆ ಹೋಗುವುದನ್ನು ನಿಷೇಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳುಗಳಿಗೆ ಮೀರದಂಥ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು:

ಪರಂತು, ಉಪಪ್ರಕರಣ (1)ರಲ್ಲಿ ತಿಳಿಸಿದ ಕಾರಣಗಳು ಇನ್ನು ಇವೆ ಎಂದು ಕೇಂದ್ರ ಸರ್ಕಾರವು ನಂಬಲು ಕಾರಣಗಳಿದ್ದರೆ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ, ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಯೊಂದು ಸಲಕ್ಕೆ ಆರು ತಿಂಗಳುಗಳಿಗೆ ಮೀರದಂಥ ಹೆಚ್ಚಿನ ಅವಧಿಯವರೆಗೆ ಅಂಥ ವರ್ಗದ ಅಥವಾ ಪ್ರವರ್ಗದ ವ್ಯಕ್ತಿಗಳು ಆ ದೇಶಕ್ಕೆ ವಲಸೆ ಹೋಗುವುದನ್ನು ನಿಷೇಧಿಸಬಹುದು.

**33. ಭದ್ರತೆ ಹಣದ ಬಗ್ಗೆ ಉಪಬಂಧ.–** (1) ಈ ಅಧಿನಿಯಮದ ಮೇರೆಗೆ ಒದಗಿಸಬೇಕೆಂದು ಅಗತ್ಯಪಡಿಸಬಹುದಾದಂಥ ಯಾವುದೇ ಭದ್ರತೆಯ ಹಣವು ಅಥವಾ ಮಾಡಬೇಕೆಂದು ಅಗತ್ಯಪಡಿಸಬಹುದಾದಂಥ ಇತರ ಹಣಕಾಸಿನ ಏರ್ಪಾಡು, ಯಾವ ಉದ್ದೇಶಕ್ಕಾಗಿ ಆ ಭದ್ರತೆಯ ಹಣವನ್ನು ಕೊಡಬೇಕೆಂದು ಅಥವಾ ಆ ಹಣಕಾಸು ಏರ್ಪಾಡು ಮಾಡಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ಉದ್ದೇಶಕ್ಕೆ ಸೂಕ್ತ ಪ್ರಮಾಣದ್ದಾಗಿರತಕ್ಕದ್ದು.

(2) ನಿಯಮಿಸಿದ ಪ್ರಾಧಿಕಾರಿಯು, ಯಾವುದೇ ಉದ್ದೇಶಕ್ಕಾಗಿ ಯಾವುದೇ ಭದ್ರತೆಯ ಹಣವನ್ನು ಯಾವ ವ್ಯಕ್ತಿಯು ಕೊಟ್ಟಿರುವನೋ ಆ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ನೋಟೀಸನ್ನು ಕೊಟ್ಟ ತರುವಾಯ ಮತ್ತು ಅಂಥ ವ್ಯಕ್ತಿಗೆ ತನ್ನ ವಾದವನ್ನು ಮಂಡಿಸಲು ಅವಕಾಶವನ್ನು ನೀಡಿದ ತರುವಾಯ, ಲಿಖಿತ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಬಳಸಿಕೊಳ್ಳುವ ಸಲುವಾಗಿ, ಅಂಥ ಭದ್ರತೆಯ ಹಣವನ್ನು ಪೂರ್ತಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ನಿರ್ದೇಶಿಸಬಹುದು.

(3) ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿಯು, ಯಾವುದೇ ಉದ್ದೇಶಕ್ಕಾಗಿ ಕೊಟ್ಟಿರುವ ಭದ್ರತೆಯ ಹಣವು ಯಾವುದೇ ಕಾರಣಕ್ಕಾಗಿ, ತಕ್ಕಷ್ಟು ಪ್ರಮಾಣದ್ದಾಗಿಲ್ಲ ಎಂದು ಅಥವಾ ಯಾವುದಾದರೂ ಕಾರಣಕ್ಕಾಗಿ ಲಭ್ಯವಾಗುತ್ತಿಲ್ಲ ಎಂದು ನಿಯಮಿಸಿದ ಪ್ರಾಧಿಕಾರಿಗೆ ಕಂಡುಬಂದರೆ, ಆ ನಿಯಮಿಸಿದ ಪ್ರಾಧಿಕಾರಿಯು ಆ ವ್ಯಕ್ತಿಗೆ ತನ್ನ ವಾದವನ್ನು ಮಂಡಿಸಲು ಅವಕಾಶ ಕೊಟ್ಟ ತರುವಾಯು, ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಭದ್ರತೆಯ ಹಣವನ್ನು ಅಥವಾ ಸಂದರ್ಭಾನುಸಾರ ಹೊಸ ಭದ್ರತೆಯ ಹಣವನ್ನು ಕೊಡುವಂತೆ ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

**34. ಭದ್ರತೆಯ ಹಣವನ್ನು ಹಿಂದಿರುಗಿಸುವುದು.–** ಈ ಅಧಿನಿಯಮದ ಮೇರೆಗೆ ಕೊಟ್ಟಿರುವ ಯಾವುದೇ ಭದ್ರತೆ ಹಣವನ್ನು, ಅದನ್ನು ಯಾವ ಉದ್ದೇಶಕ್ಕಾಗಿ ಕೊಡಲಾಗಿದೆಯೋ ಆ ಉದ್ದೇಶಕ್ಕೆ ಅದು ಇನ್ನು ಮುಂದೆ ಅಗತ್ಯವಿಲ್ಲ ಎನಿಸಿದಾಗ ಹಿಂದಿರುಗಿಸತಕ್ಕದ್ದು ಅಥವಾ ಸಂದರ್ಭಾನುಸಾರ ಬಿಡುಗಡೆ ಮಾಡತಕ್ಕದ್ದು. ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ಭದ್ರತೆಯ ಹಣವನ್ನು ಯಾವ ಸಂದರ್ಭ ಸನ್ನಿವೇಶಗಳಲ್ಲಿ ಮತ್ತು ಯಾವ ರೀತಿಯಲ್ಲಿ ಬಿಡುಗಡೆ ಮಾಡಬಹುದೋ ಅಥವಾ ಹಿಂದಿರುಗಿಸಬಹುದೋ ಆ ಇತರ ಸಂದರ್ಭ ಸನ್ನಿವೇಶಗಳು ಮತ್ತು ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು.

**35. ವ್ಯಕ್ತಿಗಳನ್ನು, ಒಯ್ಯುವ ವಾಹನಗಳನ್ನು ಶೋಧನೆ ಮಾಡಲು ವಶಪಡಿಸಿಕೊಳ್ಳಲು ಮತ್ತು ತಡೆದಿಟ್ಟುಕೊಳ್ಳಲು ಅಧಿಕಾರ, ಇತ್ಯಾದಿ.–** ಸೀಮಾ ಸುಂಕ ಅಧಿನಿಯಮ, 1962 (1962ರ 52)ರ ಮೆರೆಗೆ ವ್ಯಕ್ತಿಗಳನ್ನು, ನೌಕೆಗಳನ್ನು ಅಥವಾ ವಿಮಾನವನ್ನು ಅಥವಾ ಯಾವುದೇ ಇತರ ಒಯ್ಯುವ ವಾಹನವನ್ನು ಶೋಧನೆ ಮಾಡುವುದಕ್ಕೆ ಮತ್ತು ತಡೆಹಿಡಿದಿಟ್ಟುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅಥವಾ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ತಡೆಯುವ ಅಥವಾ ಪತ್ತೆ ಮಾಡುವ ಉದ್ದೇಶಕ್ಕಾಗಿ ಅನ್ಯಥಾ ಬಂಧಿಸುವುದಕ್ಕೆ ಸಂಬಂಧಪಟ್ಟಂತೆ ಅಥವಾ ಆ ಅಧಿನಿಯಮದ ಮೇರೆಗೆ ಯಾವುದೇ ಅಪರಾಧ ಮಾಡಿರುವನೆಂದು ಶಂಕಿಸಲಾದ ವ್ಯಕ್ತಿಯನ್ನು ಬಂಧಿಸುವುದಕ್ಕೆ

ಸಂಬಂಧಪಟ್ಟಂತೆ ಸೀಮಾ ಸುಂಕ ಅಧಿಕಾರಿಗಳಿಗೆ ಕಾಲಕಾಲಕ್ಕೆ ಪ್ರದಾನ ಮಾಡಿರುವ ಎಲ್ಲಾ ಅಧಿಕಾರಗಳನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ತಡೆಗಟ್ಟುವ ಅಥವಾ ಪತ್ತೆ ಹಚ್ಚುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಮಾಡಿರುವನೆಂದು ಶಂಕಿಸಲಾದ ವ್ಯಕ್ತಿಯನ್ನು ಬಂಧಿಸುವುದಕ್ಕಾಗಿ,–

(ಎ) ಅಂಥ ಯಾರೇ ಸೀಮಾ ಸುಂಕ ಅಧಿಕಾರಿಯು; ಅಥವಾ

(ಬಿ) ವಲಸಿಗರ ಮಹಾ ಸಂರಕ್ಷಣಾಧಿಕಾರಿಯು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯು; ಅಥವಾ

(ಸಿ) ವಲಸೆ ತನಿಖಾಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು

– ಚಲಾಯಿಸಬಹುದು.

**36. ವಿವರಪಟ್ಟಿಕೆಗಳು ಮತ್ತು ರಿಜಿಸ್ಟರ್‌ಗಳು.–** (1) ನೌಕರಿಗೆ ಭರ್ತಿ ಮಾಡಿಕೊಳ್ಳುವ ಪ್ರತಿಯೊಬ್ಬ ಏಜೆಂಟನು ನಿಯಮಿಸಬಹುದಾದಂಥ ರಿಜಿಸ್ಟರ್‌ಗಳನ್ನು ಮತ್ತು ಇತರ ದಾಖಲೆಗಳನ್ನು ಇಡತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯತಕಾಲಿಕ ವಿವರಪಟ್ಟಿಕೆಗಳನ್ನು ಅಥವಾ ಇತರ ವಿವರಪಟ್ಟಿಕೆಗಳನ್ನು ನಿಯಮಿಸಿದ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(2) ವಲಸಿಗರ ಮಹಾ ಸಂರಕ್ಷಣಾಧಿಕಾರಿಯು, ನೋಂದಣಿ ಪ್ರಾಧಿಕಾರಿಯು, ಸಕ್ಷಮ ಪ್ರಾಧಿಕಾರಿಯು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯು ಆದೇಶ ನೀಡಿ ನೌಕರಿಗೆ ಭರ್ತಿ ಮಾಡಿಕೊಳ್ಳುವ ಏಜೆಂಟನಿಂದ ಯಾವುದೇ ಇತರ ವಿವರಪಟ್ಟಿಯನ್ನು ಅಥವಾ ಮಾಹಿತಿಯನ್ನು ತರಿಸಿಕೊಳ್ಳಬಹುದು.

(3) ವಲಸಿಗರ ಮಹಾ ಸಂರಕ್ಷಣಾಧಿಕಾರಿಯು, ನೋಂದಣಿ ಪ್ರಾಧಿಕಾರಿಯು, ಸಕ್ಷಮ ಪ್ರಾಧಿಕಾರಿಯು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯು ಅಥವಾ ವಲಸೆ ತನಿಖಾ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, ನೌಕರಿಗೆ ಭರ್ತಿ ಮಾಡುವ ಏಜೆಂಟನು ಉಪಪ್ರಕರಣ (1)ರ ಮೇರೆಗೆ ಇಟ್ಟಿರುವಂಥ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಾಖಲೆಯನ್ನು ಪರಿಶೀಲಿಸಬಹುದು ಮತ್ತು ಅಂಥ ಪರಿಶೀಲನೆಯ ಉದ್ದೇಶಕ್ಕಾಗಿ ನೌಕರಿಗೆ ಭರ್ತಿ ಮಾಡಿಕೊಳ್ಳುವ ಏಜೆಂಟನು ವ್ಯವಹಾರ ನಡೆಸುತ್ತಿರುವ ಆವರಣವನ್ನು ಯಾವುದೇ ಸೂಕ್ತ ಕಾಲದಲ್ಲಿ ಪ್ರವೇಶಿಸಬಹುದು.

**37. ಪ್ರಾಧಿಕಾರಿಗಳು ಮತ್ತು ಅಧಿಕಾರಿಗಳು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರುವುದು.–** (1) ವಲಸಿಗರ ಮಹಾ ಸಂರಕ್ಷಣಾಧಿಕಾರಿಯು, ನೋಂದಣಿ ಪ್ರಾಧಿಕಾರಿಯು, ಸಕ್ಷಮ ಪ್ರಾಧಿಕಾರಿಯು ಮತ್ತು ಪ್ರತಿಯೊಬ್ಬ ವಲಸಿಗರ ಸಂರಕ್ಷಣಾಧಿಕಾರಿಯು ಈ ಅಧಿನಿಯಮದ ಮೇರೆಗಿನ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ಎಂದರೆ:–

(ಎ) ಸಾಕ್ಷಿಗಳನ್ನು ಸಮನು ಮಾಡುವುದಕ್ಕೆ ಮತ್ತು ಅವರ ಹಾಜರಾತಿಯನ್ನು ಒತ್ತಾಯಿಸುವುದಕ್ಕೆ;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದಕ್ಕೆ;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದಕ್ಕೆ;

(ಡಿ) ಅಫಿಡಾವಿಟ್‌ಗಳಲ್ಲಿ ಸಾಕ್ಷ್ಯವನ್ನು ಪಡೆಯುವುದಕ್ಕೆ; ಮತ್ತು

(ಇ) ಸಾಕ್ಷಿಗಳ ಅಥವಾ ದಸ್ತವೇಜುಗಳ ಪರೀಕ್ಷೆಗಾಗಿ ಕಾರ್ಯಾಜ್ಞೆಯನ್ನು ಹೊರಡಿಸುವುದಕ್ಕೆ

– ಸಂಬಂಧಪಟ್ಟಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ನ್ಯಾಯಾಲಯದಲ್ಲಿ ಯಾವ ಅಧಿಕಾರಗಳು ನಿಹಿತಗೊಂಡಿರುತ್ತವೆಯೋ ಅದೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ವಲಸಿಗರ ಮಹಾ ಸಂರಕ್ಷಣಾಧಿಕಾರಿಯ ಅಥವಾ ನೋಂದಣಿ ಪ್ರಾಧಿಕಾರಿಯ ಅಥವಾ ಸಕ್ಷಮ ಪ್ರಾಧಿಕಾರಿಯ ಅಥವಾ ವಲಸಿಗರ ಸಂರಕ್ಷಣಾಧಿಕಾರಿಯ ಮುಂದೆ ಇರುವಂಥ ಪ್ರತಿಯೊಂದು ವ್ಯವಹರಣೆಯು ಭಾರತ ದಂಡ ಸಂಹಿತೆ (1860ರ 45)ಯ, ಪ್ರಕರಣ 193 ಮತ್ತು 228ರ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ವಲಸಿಗರ ಮಹಾ ಸಂರಕ್ಷಣಾಧಿಕಾರಿಯನ್ನು, ನೊಂದಣಿ ಪ್ರಾಧಿಕಾರಿಯನ್ನು, ಸಕ್ಷಮ ಪ್ರಾಧಿಕಾರಿಯನ್ನು ಮತ್ತು ಪ್ರತಿಯೊಬ್ಬ ವಲಸಿಗರ ಸಂರಕ್ಷಣಾಧಿಕಾರಿಯನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 195ರ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದ್ದು.

**38. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ವಲಸಿಗರ ಮಹಾ ಸಂರಕ್ಷಣಾಧಿಕಾರಿಗೆ, ನೋಂದಣಿ ಪ್ರಾಧಿಕಾರಿಗೆ, ಸಕ್ಷಮ ಪ್ರಾಧಿಕಾರಿಗೆ ಅಥವಾ ಯಾರೇ ವಲಸಿಗರ ಸಂರಕ್ಷಣಾಧಿಕಾರಿಗೆ ನಿರ್ದೇಶನಗಳನ್ನು ನೀಡಬಹುದು.

**39. ಇತರ ಕಾನೂನುಗಳ ಪರಿಣಾಮ.–** (1) ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವು, ಈ ಅಧಿನಿಯಮವಲ್ಲದ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮವಲ್ಲದ ಯಾವುದೇ ಅಧಿನಿಯಮಿತಿಯ ಬಲದಿಂದ ಮಾಡಿಕೊಂಡಿದ್ದ ಯಾವುದೇ ಒಪ್ಪಂದದಲ್ಲಿ ಅಥವಾ ಇತರ ಲಿಖಿತದಲ್ಲಿ ಆ ಉಪಬಂಧಗಳಿಗೆ ಅಥವಾ ಈ ನಿಯಮಕ್ಕೆ ಅಸಂಗತವಾದುದು ಏನೇ ಇದ್ದರೂ, ಪರಿಣಾಮ ಉಳ್ಳದ್ದಾಗಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಯಾವುದೇ ಇತರ ಕಾನೂನುಗಳಿಗೆ ಹೆಚ್ಚಿಗೆಯಾಗಿ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**40. ಪ್ರತ್ಯಾಯೋಜನೆ.–** ಕೇಂದ್ರ ಸರ್ಕಾರವು ಯಾವ ಅಧಿಕಾರವನ್ನು ಅಥವಾ ಪ್ರಕಾರ್ಯವನ್ನು,–

(ಎ) ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾಗಿದೆಯೋ ಅಥವಾ ನಿರ್ವಹಿಸಬಹುದಾಗಿದೆಯೋ ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ನೋಂದಣಿ ಪ್ರಾಧಿಕಾರಿಯು, ಸಕ್ಷಮ ಪ್ರಾಧಿಕಾರಿಯು ಅಥವಾ ವಲಸಿಗರ ಸಂರಕ್ಷಣಾಧಿಕಾರಿಯು ಚಲಾಯಿಸಬಹುದಾಗಿದೆಯೋ ಅಥವಾ ನಿರ್ವಹಿಸಬಹುದಾಗಿದೆಯೋ

– ಆ ಯಾವುದೇ ಅಧಿಕಾರವನ್ನು ಅಥವಾ ಪ್ರಕಾರ್ಯವನ್ನು ಅಧಿಸೂಚನೆಯಲ್ಲಿ, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ,–

(i) ಕೇಂದ್ರ ಸರ್ಕಾರದ ಅಧೀನದಲ್ಲಿರುವ ಅಧಿಕಾರಿಯು, ಅಥವಾ ಪ್ರಾಧಿಕಾರಿಯು; ಅಥವಾ

(ii) ಯಾವುದೇ ರಾಜ್ಯ ಸರ್ಕಾರವು ಅಥವಾ ಆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರಿಯು; ಅಥವಾ

(iii) ಭಾರತದ ರಾಜತಾಂತ್ರಿಕ ನಿಯೋಗ ಯಾವ ವಿದೇಶದಲ್ಲಿ ಇಲ್ಲವೋ ಅಂಥ ಯಾವುದೇ ವಿದೇಶದಲ್ಲಿ ಇರುವ ವಿದೇಶಿ ಕಾನ್ಸುಲರ್ ಕಚೇರಿಯು

– ಚಲಾಯಿಸಬಹುದೆಂದು ಅಥವಾ ನಿರ್ವಹಿಸಬಹುದೆಂದು ಅಧಿಸೂಚನೆ ಮೂಲಕ ನಿರ್ದೇಶಿಸಬಹುದು.

**41. ವಿನಾಯಿತಿ ನೀಡಲು ಅಧಿಕಾರ.–** (1) ಕೇಂದ್ರ ಸರ್ಕಾರಕ್ಕೆ, ಪರಾಮರ್ಶೆಗಾಗಿ ತನಗೆ ಪ್ರಸ್ತಾಪವನ್ನು ಸಲ್ಲಿಸಿದಾಗ ಅಥವಾ ಅನ್ಯಥಾ ಈ ಮುಂದಿನವುಗಳ ಬಗ್ಗೆ ಎಂದರೆ:–

(ಎ) ಯಾವುದೇ ವಿದೇಶದೊಂದಿಗೆ ಇರುವ ಸ್ನೇಹಮಯ ಸಂಬಂಧಗಳಿಗೆ; ಅಥವಾ

(ಬಿ) ವಲಸಿಗರಿಗೆ ಉತ್ತಮ ಗುಣಮಟ್ಟದ ಜೀವನ ಹಾಗೂ ಕಾರ್ಯನಿರ್ವಹಣಾ ಪರಿಸ್ಥಿತಿಗಳನ್ನು ಒದಗಿಸುವ ಮತ್ತು ಅವರನ್ನು ನೌಕರಿಗೆ ಭರ್ತಿ ಮಾಡಿಕೊಳ್ಳುವ ಉತ್ತಮ ವಿಧಾನಗಳನ್ನು ಮತ್ತು ನಿಯೋಜನೆಯ ಷರತ್ತುಗಳನ್ನು ಅಳವಡಿಸಿಕೊಂಡಿರುವ ಯಾರೇ ವಿದೇಶಿ ನಿಯೋಜಕನು ಅಥವಾ ವಿದೇಶಿ ನಿಯೋಜಕನ ವರ್ಗವು ಒಳ್ಳೆಯ ಹೆಸರುಗಳಿಸಿರುವುದನ್ನು; ಅಥವಾ

(ಸಿ) ಸಾರ್ವಜನಿಕ ಉದ್ಯಮವು ಅಥವಾ ವಿದೇಶದಲ್ಲಿ ತನ್ನ ಯೋಜನೆಗಳ ಅನುಷ್ಠಾನಕ್ಕಾಗಿ ಅನುಮೋದಿತ ಉದ್ಯಮವು ಅನುಸರಿಸುತ್ತಿರುವ ನೌಕರಿ ಭರ್ತಿ ವಿಧಾನಗಳನ್ನು ಮತ್ತು ಅದು ನಿರ್ದಿಷ್ಟಪಡಿಸಿರುವ ನಿಯೋಜನೆಯ ಷರತ್ತುಗಳನ್ನು; ಅಥವಾ

(ಡಿ) ವಿದೇಶದಲ್ಲಿ ನಿಯೋಜಿತರಾಗಿರುವ ಸರ್ಕಾರಿ ಅಧಿಕಾರಿಗಳು ಅಂಥ ಸರ್ಕಾರಿ ಅಧಿಕಾರಿಗಳೊಂದಿಗೆ ಹೋಗಿರುವ ಅವರ ಮನೆಕೆಲಸದ ನೌಕರರ ಪ್ರಯಾಣ ವೆಚ್ಚವನ್ನು ಸರ್ಕಾರವೇ ಭರಿಸಿದ್ದರೆ ಅಂಥ ಮನೆಕೆಲಸದ ನೌಕರರಿಗೆ ನೀಡಿರುವ ಸೌಲಭ್ಯಗಳನ್ನು ಮತ್ತು ಆ ನೌಕರರ ಸೇವೆಯ ಷರತ್ತುಗಳನ್ನು; ಮತ್ತು

(ಇ) ಇತರೇ ಎಲ್ಲ ಸುಸಂಗತ ಪರಿಗಣನೆಗಳನ್ನು

– ಗಮನದಲ್ಲಿಟ್ಟುಕೊಂಡು ವಿಚಾರ ಮಾಡಿದಾಗ ಅಂಥ ವಿದೇಶ ಪ್ರತಿಷ್ಠಿತ ವ್ಯಕ್ತಿಗೆ ಅಥವಾ ವಿದೇಶಿ ನಿಯೋಜಕರ ವರ್ಗಕ್ಕೆ, ಸಾರ್ವಜನಿಕ ಉದ್ಯಮಕ್ಕೆ, ಅನುಮೋದಿತ ಸಂಸ್ಥೆಗೆ ಅಥವಾ ಸರ್ಕಾರಿ ಅಧಿಕಾರಿಗಳಿಗೆ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳು ಅನ್ವಯವಾಗದಂತೆ ವಿನಾಯಿತಿ ನೀಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಅಥವಾ ವಿಹಿತವೆಂದು ಮನವರಿಕೆಯಾದರೆ, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ಯಾವುವಾದರೂ ಷರತ್ತುಗಳನ್ನು ನಿರ್ದಿಷ್ಟಪಡಿಸುವುದಿದ್ದರೆ ಅವುಗಳಿಗೊಳಪಟ್ಟು ಹಾಗೆ ವಿನಾಯಿತಿ ನೀಡಬಹುದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಸಾರ್ವಜನಿಕ ಉದ್ಯಮ" ಎಂದರೆ:–

(i) ಸರ್ಕಾರದ ಸ್ವಾಮ್ಯದಲ್ಲಿರುವ ಹಾಗೂ ಅದರ ನಿಯಂತ್ರಣದಲ್ಲಿರುವ ಉದ್ಯಮ; ಅಥವಾ

(ii) ಕಂಪನಿಗಳ ಅಧಿನಿಯಮ, 1956 (1956ರ 1)ರ ಪ್ರಕರಣ 617ರಲ್ಲಿ ಪರಿಭಾಷಿಸಿರುವಂಥ ಸರ್ಕಾರಿ ಕಂಪನಿ; ಅಥವಾ

(iii) ಯಾವುದೇ ಕೇಂದ್ರ ಅಧಿನಿಯಮದ, ಪ್ರಾಂತೀಯ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ನಿಗಮಿತ ನಿಕಾಯ;

(ಬಿ) "ಮಾನ್ಯತೆ ಪಡೆದ ಸಂಸ್ಥೆ" ಎಂದರೆ, ಕಂಪನಿಗಳ ಅಧಿನಿಯಮ, 1956 (1956ರ 1)ರ ಮೇರೆಗೆ ನಿಗಮಿತವಾದಂಥ ಕಂಪನಿ ಅಥವಾ ಭಾರತೀಯ ಪಾಲುದಾರಿಕೆ ಅಧಿನಿಯಮ, 1932 (1932ರ 9)ರ ಮೇರೆಗೆ ನೊಂದಾಯಿತವಾದ ಪಾಲುದಾರಿಕೆ ಸಂಸ್ಥೆ ಅಥವಾ ಸೊಸೈಟಿ ನೋಂದಣಿ ಅಧಿನಿಯಮ, 1860 (1860ರ 21)ರ ಅಥವಾ ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಸೊಸೈಟಿಗಳಿಗೆ ಸಂಬಂಧಪಟ್ಟ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಸೊಸೈಟಿ ಅಥವಾ ಈ ಪ್ರಕರಣದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅನುಮೋದಿಸಬಹುದಾದಂಥ, ಯಾವುದೇ ಕೇಂದ್ರ ಕಾನೂನಿನ, ಪ್ರಾಂತೀಯ ಕಾನೂನಿನ ಅಥವಾ ರಾಜ್ಯ ಕಾನೂನಿನ ಮೇರೆಗೆ ನೋಂದಾಯಿತವಾದ ಸಹಕಾರ ಸಂಘ.

(2) ಭಾರತದ ಮತ್ತು ವಿದೇಶದ ಅಥವಾ ವಿದೇಶಗಳ ನಡುವೆ ಆಗಿರುವ ಯಾವುದೇ ಕೌಲನ್ನು ಅಥವಾ ಒಪ್ಪಂದವನ್ನು ಅಥವಾ ಒಡಂಬಡಿಕೆಯನ್ನು ಜಾರಿಗೊಳಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾದಿಕಾರಗಳು, ಏಜೆನ್ಸಿಗಳು ಅಥವಾ ವ್ಯಕ್ತಿಗಳು ಮಾಡಿಕೊಳ್ಳುವ ನೌಕರಿ ಭರ್ತಿಗೆ ಸಾಮಾನ್ಯವಾಗಿ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳ ಪ್ರವರ್ತನೆಯಿಂದ ವಿನಾಯಿತಿ ನೀಡುವುದು ಅವಶ್ಯಕ ಎಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುದಾದರೂ ಇದ್ದರೆ ಆ ಷರತ್ತುಗಳಿಗೆ ಒಳಪಟ್ಟು ಹಾಗೆ ವಿನಾಯಿತಿ ನೀಡಬಹುದು.

**42. ಅಧಿನಿಯಮವು ಕೆಲವು ವಲಸಿಗರಿಗೆ ಅನ್ವಯಿಸದಿರುವುದು.–** ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ,–

(ಎ) ಭಾರತದ ನಾಗರಿಕನಲ್ಲದ ಯಾರೇ ವ್ಯಕ್ತಿಯನ್ನು ನೌಕರಿಗೆ ಭರ್ತಿ ಮಾಡುವುದಕ್ಕೆ ಅಥವಾ ಅವನ ವಲಸೆಗೆ;

(ಬಿ) ವಿದೇಶಿ ನೌಕರ ಭರ್ತಿ ಅಧಿನಿಯಮ, 1874 (1874ರ 4)ರ ಯಾವ ವಿದೇಶಿ ರಾಷ್ಟ್ರಗಳಿಗೆ ಅನ್ವಯಿಸುತ್ತದೆಯೋ ಆ ವಿದೇಶಿ ರಾಷ್ಟ್ರಗಳ ಸೇವೆಗಾಗಿ ಭಾರತದಲ್ಲಿ ಮಾಡಿಕೊಳ್ಳುವ ನೌಕರಿ ಭರ್ತಿಯ ನಿಯಂತ್ರಣಕ್ಕೆ

– ಅನ್ವಯವಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ.

**43. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಆ ನಿಯಮಗಳು, ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಮುಂದೆ ಹೇಳಿರುವ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಕಲ್ಪಿಸಬಹುದು, ಎಂದರೆ,–

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ ನೇಮಕಗೊಂಡ ಅಧಿಕಾರಿಗಳ ಹಾಗೂ ನಿಯೋಜಿತರ ಅಧಿಕಾರಗಳು ಮತ್ತು ಕರ್ತವ್ಯಗಳು ಮತ್ತು ಅವರ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು:

(ಬಿ) (i) ನೌಕರಿಗೆ ಭರ್ತಿ ಮಾಡಿಕೊಳ್ಳುವ ವ್ಯವಹಾರವನ್ನು ಪ್ರಾರಂಭಿಸಲು ಅಥವಾ ನಡೆಸಲು ಪ್ರಮಾಣಪತ್ರವನ್ನು ಯಾವ ನಮೂನೆಯಲ್ಲಿ ನೀಡಬೇಕೋ ಆ ನಮೂನೆ ಮತ್ತು ಪ್ರಮಾಣಪತ್ರ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಯಾವ ನಮೂನೆಯಲ್ಲಿ ಸಲ್ಲಿಸಬೇಕೋ ಆ ನಮೂನೆ;

(ii) ಭಾರತದ ಹೊರಗೆ ನಿಯೋಜನೆಗಾಗಿ ವ್ಯಕ್ತಿಗಳನ್ನು ನೌಕರಿಗೆ ಭರ್ತಿ ಮಾಡಿಕೊಳ್ಳುವುದಕ್ಕಾಗಿ ಪರ್ಮಿಟ್‌ನ್ನು ಯಾವ ನಮೂನೆಯಲ್ಲಿ ನೀಡಬೇಕೋ ಆ ನಮೂನೆ ಮತ್ತು ಪರ್ಮಿಟ್‌ನ ನೀಡಿಕೆಗಾಗಿ ಅರ್ಜಿಯನ್ನು ಯಾವ ನಮೂನೆಯಲ್ಲಿ ಸಲ್ಲಿಸಬೇಕೋ ಆ ನಮೂನೆ;

(iii) ವಲಸೆಗೆ ಅನುಮತಿಯನ್ನು ಪಡೆಯಲು ಅರ್ಜಿಯನ್ನು ಯಾವ ನಮೂನೆಯಲ್ಲಿ ಸಲ್ಲಿಸಬೇಕೋ ಆ ನಮೂನೆ;

(iv) ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ಅಪೀಲನ್ನು ಯಾವ ನಮೂನೆಯಲ್ಲಿ ಸಲ್ಲಿಸಬೇಕೋ ಆ ನಮೂನೆ;

(ಸಿ) ವಲಸೆಗೆ ಅನುಮತಿಯ ರೂಪದಲ್ಲಿ ಅಧಿಕಾರ ಪತ್ರವನ್ನು ಯಾವ ರೀತಿಯಲ್ಲಿ ಮತ್ತು ಯಾವ ನಮೂನೆಯಲ್ಲಿ ನೀಡಬಹುದೋ ಆ ರೀತಿ ಮತ್ತು ಆ ನಮೂನೆ;

(ಡಿ) ಪ್ರಮಾಣಪತ್ರಕ್ಕಾಗಿ ಅಥವಾ ಪರ್ಮಿಟ್‌ಗಾಗಿ ಅಥವಾ ವಲಸೆಗೆ ಅನುಮತಿಗಾಗಿ ಸಲ್ಲಿಸುವ ಅರ್ಜಿಯಲ್ಲಿ ಒಳಗೊಂಡಿರಬೇಕಾದ ವಿವರಗಳು;

(ಇ) ಈ ಅಧಿನಿಯಮದ ಮೇರೆಗೆ ನಡೆಸಬೇಕಾದಂಥ ಬೇರೆ ಬೇರೆ ವಿಚಾರಣೆಗಳನ್ನು ಯಾವ ರೀತಿಯಲ್ಲಿ ನಡೆಸಬೇಕೋ ಆ ರೀತಿ;

(ಎಫ್) ಪ್ರಮಾಣಪತ್ರದ ಅಥವಾ ಪರ್ಮಿಟ್ಟಿನ ನಿಬಂಧನೆಗಳ ಮತ್ತು ಷರತ್ತುಗಳ ಯಥೋಚಿತ ಪಾಲನೆಯನ್ನು ಸುನಿಶ್ಚಿತಪಡಿಸಲು ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಭದ್ರತೆಯ ಹಣವನ್ನು ಯಾವ ರೀತಿಯಲ್ಲಿ ಒದಗಿಸಬೇಕೋ ಆ ರೀತಿ;

(ಜಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ದಸ್ತಾವೇಜುಗಳನ್ನು ಮತ್ತು ದಸ್ತಾವೇಜುಗಳ ಪ್ರತಿಗಳನ್ನು ಯಾವ ರೀತಿಯಲ್ಲಿ ಸತ್ಯಾಪನೆ ಮಾಡಬೇಕೋ ಅಥವಾ ಪ್ರಮಾಣೀಕರಿಸಬೇಕೋ ಆ ರೀತಿ;

(ಹೆಚ್) ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಅಪೀಲನ್ನು ವಿಚಾರಣೆ ಮಾಡುವಾಗ ಅನುಸರಿಸಬೇಕಾದ ಕಾರ್ಯವಿಧಾನ;

(ಐ) ಈ ಅಧಿನಿಯಮದ ಮೇರೆಗೆ ಸಲ್ಲಿಸುವ ಅರ್ಜಿಗಳ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ಸಲ್ಲಿಸಬೇಕಾದ ಫೀಜು;

(ಜೆ) ನೌಕರಿಗೆ ಭರ್ತಿ ಮಾಡುವ ಏಜೆಂಟನು ತಾನು ನೀಡುವ ಸೇವೆಗಳ ಸಂಬಂಧದಲ್ಲಿ ವಲಸಿಗನಿಂದ ಯಾವ ವೆಚ್ಚಗಳನ್ನು ವಸೂಲಿ ಮಾಡಬಹುದೋ ಆ ವೆಚ್ಚಗಳು ಹಾಗೂ ಅಂಥ ವೆಚ್ಚಗಳ ಪ್ರಮಾಣ ಮತ್ತು ಮಿತಿಗಳು;

(ಕೆ) ಈ ಅಧಿನಿಯಮದ ಮೇರೆಗೆ ಪ್ರಮಾಣಪತ್ರವನ್ನು ಅಥವಾ ಪರ್ಮಿಟ್‌ನ್ನು ಅಥವಾ ವಲಸೆಗೆ ಅನುಮತಿಯನ್ನು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ನೀಡಬೇಕೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಎಲ್) ಈ ಅಧಿನಿಯಮದ ಮೇರೆಗೆ ನೀಡಿದ ಪ್ರಮಾಣಪತ್ರದ ಅಥವಾ ಪರ್ಮಿಟ್ಟಿನ ಕಾನೂನು ಮಾನ್ಯ ಅವಧಿ;

(ಎಂ) ಈ ಅಧಿನಿಯಮದ ಮೇರೆಗೆ ಪರ್ಮಿಟ್ಟಿನ ಕಾನೂನುಮಾನ್ಯ ಅವಧಿಯನ್ನು ವಿಸ್ತರಿಸಲು ಅಥವಾ ಭದ್ರತೆಯ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಯಾವುದೇ ಹೆಚ್ಚಿನ ಭದ್ರತೆಯನ್ನು ಅಥವಾ ಹೊಸ ಭದ್ರತೆಯನ್ನು ನೀಡುವಂತೆ ಅಗತ್ಯಪಡಿಸಲು ಸಕ್ಷಮನಾದ ಪ್ರಾಧಿಕಾರಿ;

(ಎನ್) ವಲಸಿಗರ ಯೋಗಕ್ಷೇಮಕ್ಕಾಗಿ, ಭದ್ರತೆಗಾಗಿ ಮತ್ತು ರಕ್ಷಣೆಗಾಗಿ ಅವರಿಗೆ ಒದಗಿಸಬೇಕಾದ ವಸತಿ ಸೌಲಭ್ಯ, ದಿನಸಿ ವಸ್ತುಗಳು, ಔಷಧದ ಅಂಗಡಿಗಳು ಮತ್ತು ಸಿಬ್ಬಂದಿ ಮಾಡಬೇಕಾದ ಜೀವರಕ್ಷಕ ಮತ್ತು ನೈರ್ಮಲ್ಯ ವ್ಯವಸ್ಥೆಗಳು ಮತ್ತು ಇತರ ವ್ಯವಸ್ಥೆಗಳು ಹಾಗೂ ಏರ್ಪಾಟುಗಳು, ಮತ್ತು ಯಾವುದೇ ವಲಸಿಗರನ್ನು ಒಯ್ಯುವ ವಾಹನದಲ್ಲಿ ಇಡಬೇಕಾದ ದಾಖಲೆಗಳು;

(ಓ) ಯಾವ ವಿಷಯವನ್ನು ನಿಯಮಿಸಬೇಕಾದ ಅಗತ್ಯವಿದೆಯೋ ಅಥವಾ ನಿಯಮಿಸಬಹುದೋ ಆ ಯಾವುದೇ ಇತರ ವಿಷಯ;

**44. ಸಂಸತ್ತಿನ ಮುಂದೆ ಅಧಿಸೂಚನೆಗಳನ್ನು ಮತ್ತು ನಿಯಮಗಳನ್ನು ಇರಿಸುವುದು.–** ಪ್ರಕರಣ 2ರ ಉಪಪ್ರಕರಣ (1)ರ (ಓ) ಖಂಡದ ಮೇರೆಗೆ, ಪ್ರಕರಣ 30ರ, ಪ್ರಕರಣ 31ರ ಅಥವಾ ಪ್ರಕರಣ 32ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು ಪ್ರಕರಣ 43ರ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅವುಗಳನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಅಧಿಸೂಚನೆಯನ್ನು ಹೊರಡಿಸಬಾರದು ಎಂದು ಅಥವಾ ನಿಯಮವನ್ನು ರಚಿಸಬಾರದು ಎಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆಯು ಅಥವಾ ನಿಯಮವು ಅಂಥ ಮಾರ್ಪಾಟದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಥವಾ ನಿಯಮದ ಮೆರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**45. 1922ರ 7ನೇ ಅಧಿನಿಯಮದ ನಿರಸನ.–** ವಲಸೆ ಅಧಿನಿಯಮ, 1922ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.